ತಾರೀಖು ೧೨ನೇ ದಿಶಂಬರ ಸ॥ ೧೯೧೧ ಇಸ್ವಿ ದಿವಸ

ನೆರವೇರಿದ

ಮನೋಹರವಾದ

ದಿಲ್ಲೀ ದರಬಾರದ

ವರ್ಣನೆ.

ಲೇಖಕ

ಶಿವಪ್ಪಾ ಮಲ್ಲಪ್ಪಾ ಇಟಿಗಿಕರ.

ಮುಖತ್ಯಾರ ವಕೀಲ

ಬೆಳಗಾವ.

…ಲಿಂಗತತ್ವ ಪ್ರಕಾಶ ಮುದ್ರಾಲಯ

…ಲೇಖಕನ ಕಡೆಗೆ ಇರುತ್ತದೆ.

…ಮ್ಮತ್ತು ೨ ಆಣೆ.

ರಾವಬಹಾದ್ದೂರ

ರುದ್ರಗೌಡಾ ಚೆನವೀರಗೌಡಾ ಅರಟಾಳ

ಇಂಪೀರಿಯಲ್ ಸರ್ವ್ಹಿಸ ಆರ್ಡರ

ಡಿಸ್ಟ್ರಿಕ್ಟ ಡೆಪುಟಿ ಕಲೆಕ್ಟರ ಉತ್ತರಭಾಗ

ಬೆಳಗಾವ

ಇವರಿಗೆ

ಇವರ

ಸಮಾಜಪ್ರೇಮ ನ್ಯಾಯಪ್ರೀತಿ ಮುಂತಾದ ಅಲೌಕಿಕ
ಗುಣಗಳನ್ನು ಕಂಡು ಲೇಖಕನು ಬಹು
ನಮ್ರತೆಯಿಂದ ಈ ಗ್ರಂಥವನ್ನು
ಅರ್ಪಣ ಮಾಡಿರುತ್ತಾನೆ.

ಶಿ. ಮ ಇಟಗಿಕರ,
ಲೇಖಕ.

ಕೆಲವು ಸಂಗತಿಗಳು.

ಮೆಹರ್ಬಾನ ರುದ್ರಗೌಡಾ ಚನವೀರಗೌಡಾ ಅರಟಾಳ ಇವರ ಹಿಂದಿನ ಇತಿಹಾಸವು ಬಹಳ ದೊಡದಿರುತ್ತದೆ. ಅದರ ವರ್ಣನೆ ಮಾಡಿದರೆ ವಿಸ್ತಾರವಾಗುವದರಿಂದ ಈ ಬೆಳಗಾವ ಜಿಲ್ಹೆಯಲ್ಲಿ ಇವರು ಮಾಡಿದ ಕೆಲಸದ ಬಗ್ಗೆ ಬರೆಯುತ್ತೇನೆ.

ಇವರು ಈ ಜಿಲ್ಹೆಗೆ ಸನ್ ೧೯೪೮ ಇಸವಿಯ ಜುಲಾಯಿ ತಿಂಗಳ ದಲ್ಲಿ ಡಿ|| ಡೆಪುಟಿ ಕಲೆಕರ ವ ಸಬ್ ಡಿವ್ಹಿಜನಲ್ ಮಾಜಿಸ್ಟ್ರೇಟ ರಾಗಿ ಬಂದರು. ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಡಿಸಿ' ಸರಕಾರಕ್ಕೂ ರೈತರಿಗೂ ಹಿತವಾಗುವ ಕೆಲಸಗಳನ್ನು ಮಾಡಿ ದ್ದಲ್ಲದೆ, ತಮ್ಮ ಖಾತೆಯ ಹೊರ್ತು ಅನ್ಯ ಖಾತೆಗಳಲ್ಲಿಸಹ ಮನಸ ನ್ಹಾಕಿ ಸುಧಾರಣೆ ಮಾಡಿದ್ದಾರೆ.

೧. ಸ್ವಲ್ಪ ದಿನಗಳ ಮುಂಚೆ ಕೆಲವು ಊರುಗಳನ್ನು ಕಟೆಗಳೆಂ ದೆಣಿಸಿ, ಅವುಗಳ ಕೆಳಗೆ ಕೆಲಕೆಲವು ಹಳ್ಳಿಗಳನ್ನಿಟ್ಟು, ತಾಲೂಕ ಕಚೇರಿಗಳಿಂದ ಕಟ್ಟೆಗಳಿಗೆ ಆ ಆ ಕಟೆಗಳ ಹದ್ದಿಯಲ್ಲಿರುವ ಹಳ್ಳಿ ಗಳ ಸರಕಾರೀ ಕಾಗದಗಳನ್ನು ಒಟ್ಟುಗೂಡಿಸಿ ಕಳಿಸುವದಲ್ಲದೆ, ಹಳ್ಳಿಗಳ ಜನರು ತಮ್ಮ ತಮ್ಮ ಕಟೆಯ ಊರುಗಳಿಗೆ ಹೋಗಿ, ಆ ಕಾಗದಗಳನ್ನು ತರುವ ಸಾಂಪ್ರದಾಯವಿತ್ತು. ಇದರಿಂದ ಒಬರ ವರ್ತಮಾನವು ಮತ್ತೊಬ್ಬರಿಗೆ ತಿಳಿಯುವ ಸಂಭವ ಒದಗಿ, ಆಟ ಪಾಲು ತರತಕ್ಕ ವಾಲೀಕಾರರಿಗೆ ತ್ರಾಸವೂ ಅಡಚಣಿಯೂ ಒದಗು ತ್ತಿತ್ತು. ಅದನ್ನು ತೆಗೆದು ಯಾವತ್ತೂ ಸರಕಾರಿ ಕಾಗದಪತ್ರಗಳನ್ನು ಎಲ್ಲ ಊರುಗಳಿಗೆ ಸರ್ವ್ಹಿಸ ಟಿಕೀಟು ಹಚ್ಚಿ ಕಳಸಬೇಕೆಂದು ಸುಚನೆ ಕೊಟ್ಟಿದ್ದರಿಂದ ಸರಕಾರದವರು ಠರಾವ ಮಾಡಿದರು.

೨. ಮೊದಲು' ಹುಲ್ಲುಬನ್ನಿ ಬಹಳ ಹೆಚ್ಚು ಇತ್ತು; ಅದನ್ನು ನೋಡಿ ಮತ್ತು ರೈತರ ದೈನ್ಯತೆಯನ್ನು ಲಕ್ಷ್ಯಕ್ಕೆ ತಂದು, ಸರಕಾರಕ್ಕೆ ರಿಪೋ ರ್ಟು ಮಾಡಿ ಹುಲ್ಲುಬನ್ನಿಯ ದರವನ್ನು ಕಡಿಮೆ ಮಾಡಿಸಿದರು.

೩. ಗೌಡ, ಕುಲಕರ್ಣಿ, ದೇಸಾಯಿ, ದೇಶಪಾಂಡೆ, ವಾಲೀಕಾರ, ಕೋಲಕಾರ, ದೇವಸ್ಥಾನಕಿ ಮುಂತಾದವರು ತಮ್ಮ ನೇಮಣೂಕಿಯ ಹಣವನ್ನು ತಾಲೂಕ ತಿಜೋರಿಯಿಂದ ದರಸಾಲ ಒಯ್ಯುವಾಗ್ಗೆ ಬಹಳೇ ತ್ರಾಸವಾಗಿ, ಸ್ವಲ್ಪ ಹಣವು ಶಿಗುವವರೆಗೆ ೩|೪ ದಿವಸಗಳ ತನಕ ಕೂಡ್ರಬೇಕಾಗುತ್ತಿತ್ತು. ಈ ಯಾವತ್ತೂ ತೊಂದರೆಗಳನ್ನು ಲಕ್ಷದಲ್ಲಿ ತಂದು ಇದರ ಬಗ್ಗೆ ರಿಪೋರ್ಟ ಮಾಡಿ ಯಾವತ್ತೂ ಹಣವನ್ನು ಮನಿ ಆರ್ಡರದಿಂದ ಅವರವರ ಊರಿಗೆ ಕಳಿಸುವ ಠರಾವ ತರಿಸಿದರು. ಇದು ಸರಕಾರಕ್ಕೆ ಯೋಗ್ಯ ಕಂಡು ತಗಾಯಿಯ ಹಣವು ಸಹ ಮನಿ ಆರ್ಡರಾಗಬೇಕಂತಾ ಸರಕಾರದವರು ಠರಾವ ಮಾಡಿದರು.

೪. ನೋಂದಣಿ ಖಾತೆಯಲ್ಲಿ ಮೊದಲು ಸಬ್ ರಜಿಸ್ಟರರಿಗೆ ಶೇಕಡಾ ಉತ್ಪನ್ನದ ಮೇಲೆ ಕಮಿಶನ್ ಕೊಡುವ ಪದ್ಧತಿಯೂ, ತಮ್ಮ ಕೈಕೆಳಗಿನ ಕಾರಕೂನರನ್ನು ತಾವೇ ತಮ್ಮ ಖರ್ಚಿನಿಂದ ಇಟ್ಟುಕೊಳ್ಳುವ ನಿಯಮವೂ ಇದ್ದವು. ಇದರಿಂದ ಒದಗುವ ತೊಂದರೆಗಳನ್ನು ಬರೆಯುವದು ಅಶಕ್ಯವು. ದೊಡ್ಡ ತಾಲೂಕಿನ ನೋಂದಣಿಯ ಕಾರಕೂನನಿಗೆ ಹೆಚ್ಚು ಕಮಿಶನ್ ಶಿಗುತ್ತಿತು; ಸಣ್ಣ ತಾಲೂಕಿನವನಿಗೆ ಕಡಿಮೆ ದೊರೆಯುತ್ತಿತ್ತು. ಆದ್ದರಿಂದ ವರ್ಗಾವರ್ಗಿಯ ಕಾಲಕ್ಕೆ ಬಹಳೇ ದುಃಖವು. ಇದರ ಮೇಲೆ ಮನೋವೃತ್ತಿಯನ್ನು ಚಲ್ಲಿ, ಸರಕಾರಕ್ಕೆ ಬರೆದು ಕಾಹೀಮು ಪಗಾರದ ಸಬ್ ರಜಿಸ್ಟ್ರರರನ್ನೂ, ಅವರ ಕೈಕೆಳಗಿನ ಕಾರಕೂನರನ್ನೂ ನೇಮಿಸಿ, ಬೇಕಾದಷ್ಟು ಸಂಬಳದಿಂದ ಬೇಕಾದ ಸ್ಥಳಗಳಗೆ ವರ್ಗ ಮಾಡುವ ಪದ್ಧತಿಯನ್ನು ಇವರೇ ಸುಚನೆ ಕೊಟ್ಟು ಠರಾವ ಮಾಡಿಸಿದರು.

೫. ಇವರಆಢಳತೆಯಲ್ಲಿ ದೇಶಿಯ ಚಳವಳಿಯು ಬಹಳೇ ಯೋಗ್ಯರೀತಿಯಿಂದ ಬಂದೋಬಸ್ತ ಮಾಡಲ್ಪಟ್ಟಿತು.

೬. ಸರಕಾರೀ ನವಕರಿಯ ಜನರಿಗೆ ಲಂಚ ಕೊಟ್ಟು ಕೆಲಸ ಮಾಡಿಸಿಕೊಳ್ಳುವವರಿಗೂ, ರುಸುವತ್ತು ತೆಗೆದುಕೊಳ್ಳುವವರಿಗೂ ಯೋಗ್ಯ ಶಾಸನಗಳು ಆಗಿ, ಬಹಳ ಉತ್ತಮ ರೀತಿಯ ಬಂದೋ

ಬಸ್ತು ಮಾಡಿಸಿದ್ದು, ಸರಕಾರಕ್ಕೂ ಪ್ರಜೆಗಳಿಗೂ ಹಿತವಾಗಲು ತೋರಿಸಿದ್ದೇ ಇವರ ಮತ್ತೊಂದು ದೊಡ್ಡ ಹಾದಿಯು.

೭. ವೀರಶೈವ ಸಮಾಜದ ವಿದ್ಯಾಭಿವೃದ್ಧಿಗಾಗಿ ಧಾರವಾಡದಲ್ಲಿ ಸನ್ನ ೧೮೮೩ ಸಾಲಿನಲ್ಲಿ " ಲಿಂಗಾಯತ ಎಜ್ಯುಕೇಶನ ಫಂಡ " ಎಂಬ ಸಂಸ್ಥೆಯನ್ನು ಇವರು ಮತ್ತು ಕೈಲಾಸವಾಸಿ ನಾಮದಾರ ರಾವಬಹಾದ್ದೂರ ಗುರಸಿದ್ಧಪ್ಪಾ ಗಿಲಗಂಚಿ ಇವರು ಕೂಡಿ ಸ್ಥಾಪನ ಮಾಡಿದ್ದು ಹಿಂದಿನಿಂದ ಇವರು ಅವಿಶ್ರಾಂತ ಶ್ರಮಪಟ್ಟು ಫಂಡನ್ನು ವೃದ್ಧಿಗೊಳಿಸಿರುತ್ತಾರೆ. ಇದನ್ನು ಕಂಡು ಇತರ ಜಾತಿಯವರ ಸಹಾ ಫಂಡ ಎರ್ಪಾಡ ಮಾಡಿದ್ದಾರೆ ಇದು ಚಿರಕಾಲ ಇರುವ ಸಂಸ್ಥೆಯು.

ಈ ಪ್ರಕಾರ ಇವರ ಅನೇಕ ಕೆಲಸಗಳು ಸರಕಾರಕ್ಕೆ ಯೋಗ್ಯ ಕಂಡದ್ದರಿಂದ, ಇವರಿಗೆ ತಾರೀಖು ೩ ಜೂನ ಸನ್ನ ೧೯೦೯ ಇಸವಿ ದಿವಸ ನಾಮದಾರ ಲಾರ್ಡ ಕ್ಲಾರ್ಕ ಗವ್ಹರ್ನರ ಸಾಹೇಬ ಬಾ॥ ಮುಂಬಯಿ ಇವರ, ವಿದ್ಯಮಾನರಿಂದ ಪುಣೆಯ ಮುಕ್ಕಾಮಿನಲ್ಲಿ ದರಬಾರ ನೆರವೇರಿಸಿ, ಅದರಲ್ಲಿ ಇವರು ಮಾಡಿದ ಕೆಲಸಗಳನ್ನು ವರ್ಣಿಸಿ **" ರಾವಬಹಾದ್ದೂರ "** ಎಂಬ ಬಹುಮಾನದ ಪದವಿಯನ್ನು ಕೊಟ್ಟರು. ಇದೇ ಸಮಯದಲ್ಲಿ ಮುಂಬಯಿ ಸರಕಾರದವರು 'ರುದ್ರಗೌಡರಿಗೆ ಇದರಕ್ಕಿಂತಲೂ ಹೆಚ್ಚಿನ ಅಧಿಕಾರದ ಕೆಲಸ ಕೊಡಬೇಕೆಂದು ಸರಕಾರದ ಅಭಿಪ್ರಾಯವಿತ್ತು, ಪರಂತು ಅವರು ತೀವ್ರ ಪೆನಶನದಮೇಲೆ ಹೋಗುವರೆಂದು ಸರಕಾರದವರದು ನಿರುಪಾಯವಾಯಿತು' ಎಂಬ ಉದ್ಗಾರವನ್ನು ತೋರಿಸಿದರು. ಮುಂದೆ ದಿಲ್ಲಿ ದರ್ಬಾರದ ಪ್ರೀತ್ಯರ್ಥವಾಗಿ **ಇಂಪೀರಿಯಲ್ ಸರ್ವ್ಹಿಸ ಆರ್ಡರ** ಎಂಬುವ ಬಹುಮಾನದ ಪದವಿಯನ್ನು ನಾಮದಾರ ಕಮಿಶನರ ಸಾ॥ ಬಾ॥ ದಕ್ಷಿಣಭಾಗ ಇವರ ಮಾರ್ಫತ ಬೆಳಗಾವಿಯಲ್ಲಿ ದೊಡ್ಡ ದರಬಾರವನ್ನು ನೆರವೇರಿಸಿ ಕೊಡಲ್ಪಟ್ಟಿತು.

ಈ ಹೊತ್ತಿನವರಿಗೆ ಬೆಳಗಾಂವ ಜಿಲ್ಹೆಗೆ ಡಿ॥ ಡೆ॥ ಕಲೆಕ್ಟರಾಗಿ ಬಂದ ಯಾವ ಅಧಿಕಾರಿಯರಿಗೂ ಇಂಥ ಬಹುಮಾನದ ಪದವಿಗಳು ದೊರೆತಿಲ್ಲಾ. ಇದೇ ಮೊದಲನೆಯದು ಇರುತ್ತದೆ. ಮುಂದೆ ಈ ಕೆಲಸದಮೇಲೆ ಬರುವವರು ಇವರಂತೆ ಸರಕಾರಕ್ಕೂ ಪ್ರಜೆಗಳಿಗೂ ಹಿತವಾಗುವ ಕೆಲಸಗಳನ್ನು ಮಾಡಿ ಅರಸರಮೇಲೆ ಪ್ರಜೆಗಳ ಪ್ರೀತಿಯನ್ನು ಬೆಳಿಸಿ ಇವರಂತೆಯೇ ಪದವಿಗಳನ್ನು ಪಡೆಯಲಿ ಎಂದು ದೇವರನ್ನು ಸ್ತುತಿಸುತ್ತೇನೆ.



ಪ್ರಸ್ತಾವನೆಯು.

ಅನೇಕ ಹಳ್ಳಿಗಳಲ್ಲಿ ವಾಸಮಾಡುವ ಎಷ್ಟೋ ಸದ್ಗೃಹಸ್ಥರಿಗೆ ಮತ್ತು ವಿದ್ಯಾರ್ಥಿಗಳಿಗೆ ವರ್ತಮಾನ ಪತ್ರಗಳನ್ನೂ ಮಾಸಿಕ ಪುಸ್ತಕಗಳನ್ನೂ ಓದುವ ಪರಿಪಾಠವು ಕಡಿಮೆ ಇರುತ್ತದೆ. ಆದಕಾರಣ ನಮ್ಮ ಬಾದಶಹರವರು, ವ ಅವರ ರಾಜ್ಯವಿಸ್ತಾರವು ಅದರ ವ್ಯವಸ್ಥೆಯು ಮತ್ತು ಅವರು ನೆರವೇರಿಸಿದ ರಾಜದರಬಾರವು ಇವುಗಳನ್ನೂ ಅವರ ರಾಜ್ಯದಲ್ಲಿ ನಡೆದ ಸಂಗತಿಗಳನ್ನೂ ಹಳ್ಳಿಗಳ ಜನರು ತಿಳುಕೊಳ್ಳುವ ಸಂಭವವು ತೀರ ಕಡಿಮೆ ಇರುತ್ತದೆ. ಇದನ್ನು ತಿಳಿದು ರಾಜರಿಂದ ಆದ ಉಪಕಾರಗಳನ್ನು ತಿಳುಕೊಂಡು, ಎಲ್ಲರೂ ರಾಜರ ಮೇಲೆ ಭಕ್ತಿ ಉಂಟಾದವರಾಗಬೇಕೆಂದು ದಿಲ್ಲಿಯ ದರಬಾರದ ವಿಷಯಕವಾದ ಈ ಚಿಕ್ಕ ಪುಸ್ತಕವನ್ನು ಯಥಾಮತಿ ಬರೆದಿರುತ್ತೇನೆ. ಇದರಲ್ಲಿ ಏನಾದರೂ ತಪ್ಪುಗಳಿದ್ದರೆ ಕ್ಷಮಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ತಾರೀಖು ೩ ನೇ ಜೂನ ಸನ್ ೧೯೧೨ ಇಸವಿಯ ದಿವಸ ನಮ್ಮ ಬಾದಶಹರವರ ಜನ್ಮ ದಿವಸದ ವಿಷಯವಾಗಿ ಬೆಳಗಾವಿಯಲ್ಲಿ ಆಗುವ ಉತ್ಸವದ ಪ್ರೀತ್ಯರ್ಥವಾಗಿ ಈ ಪುಸ್ತಕದ ಪ್ರತಿಗಳನ್ನು ಜಿಲ್ಹೆಯ ಯಾವತ್ತೂ ಕನ್ನಡ ಸಾಲೆಗಳಲ್ಲಿ ಹಂಚಲಿಕ್ಕೆ ಲೋಕಪ್ರಿಯರಾದ ಮೆಹರ್ಬಾನ ಆರ್. ಸಿ. ಬ್ರಾವ್ನ್ ಸಾಹೇಬ ಬಹಾದ್ದೂರ ಕಲೆಕ್ಟರ ವ ಡಿಸ್ಟ್ರಿಕ್ಟ ಮಾಜಿಸ್ಟ್ರೇಟ ಜಿಲ್ಹಾ ಬೆಳಗಾವ ಇವರು ಪರವಾನಗಿ ಕೊಟ್ಟದ್ದರಿಂದ ನಾನು ಅವರಿಗೆ ಬಹಳೇ ಆಭಾರಿಯಾಗಿರುತ್ತೇನೆ.

೨ । ೬ । ೧೨.   ತಿ. ಮ. ಇಟಗಿಕರ.

ಬ್ರಿಟಿಶ ರಾಜ್ಯದಲ್ಲಿ ಇರುವ
ಶಾಂತೀ ಮತ್ತು ಸುಖ.

ದೇವರು ಇಡೀಲೋಕವನ್ನು ಅಪ್ರತ್ಯಕ್ಷ ರೀತಿಯಿಂದ ಕಾಪಾಡುತ್ತಾನೆ. ಆದರೆ ಅರಸರು ಪ್ರತ್ಯಕ್ಷರೀತಿಯಿಂದ ಕಾಪಾಡಿ ಪ್ರಜೆಗಳಿಗೆ ಸುಖ ಕೊಡುತ್ತಾರೆ. ಇಡೀ ಲೋಕದ ಅರಸರಲ್ಲಿ ಪ್ರಜೆಗಳನ್ನು ಒಳ್ಳೇ ನ್ಯಾಯದಿಂದಲೂ ನಿಷ್ಪಕ್ಷಪಾತದಿಂದಲೂ ಕಾಪಾಡುವವರಾದ ಈಗಿನ ನಮ್ಮ **ಪಂಚಮಜಾರ್ಜ** ಬಾದಶಹರವರು ಸಾರ್ವಭೌಮ ಅರಸರಾಗಿ ಇರುತ್ತಾರೆ. ಹ್ಯಾಗಂದರೆ ಭೂಗೋಲಶಾಸ್ತ್ರಜ್ಞರ ಅಭಿಪ್ರಾಯದಂತೆ ಈ ಪ್ರಥ್ವಿಯಲ್ಲಿ ೬ ಖಂಡಗಳು ಮಾಡಲ್ಪಟ್ಟಿರುತ್ತವೆ. ಈ ಎಲ್ಲ ಖಂಡಗಳಲ್ಲಿಯೂ ನಮ್ಮ ಸಾರ್ವಭೌಮ ರಾಜರವರ ರಾಜ್ಯವು ವಿಸ್ತಾರವಾಗಿ ಇದ್ದೇ ಇರುತ್ತದೆ. ಇನ್ನು ನಮ್ಮ ಬಾದಶಹರವರು ಎಲ್ಲಿ ಇರುತ್ತಾರೆ? ಅವರಿಂದ ನಮಗೆ ಯಾವ ಯಾವ ರೀತಿಯಿಂದ ಸುಖಗಳು ಉಂಟಾಗಿರುತ್ತವೆ? ಎಂಬುವದನ್ನು ತಿಳುಕೊಳ್ಳುವದು ಸದ್ಯಕ್ಕೆ ಅತ್ಯವಶ್ಯವಾದದ್ದು.

ಯುರೋಪಖಂಡದಲ್ಲಿರುವ ಇಂಗ್ಲಂಡದೇಶದ ರಾಜಧಾನಿಯಾದ **ಲಂಡನ** ಪಟ್ಟಣವು ನಮ್ಮ ಸಾರ್ವಭೌಮರವರ ಜನ್ಮಭೂಮಿಯೂ ವಾಸಸ್ಥಳವೂ, ಆಗಿರುತ್ತದೆ. ಈ ಇಂಗ್ಲಂಡದ ರಾಜಮನೆತನಕ್ಕೆ ನಮ್ಮ ದೇಶದ ರಾಜಸೂತ್ರಗಳು ಸನ್ ೧೮೫೮ ನೇ ಇಸವಿಯಲ್ಲಿ ಸಂಪೂರ್ಣರೀತಿಯಿಂದ ದೊರಕಿರುತ್ತವೆ. ಆಗ್ಗ್ಯೆ ಈಗಿನ ಬಾದಶಹರವರ ಅಜ್ಜಿಯರೂ ಪರಮಪುಣ್ಯಾ ಶಾಲಿನಿಯರೂ ಮತ್ತು ಲೋಕಕ್ಕೆ ಪ್ರಿಯರೂ ಆದ ವ್ಹಿಕ್ಟೋರಿಯಾ ಮಹಾರಾಣಿಯವರು ನಮ್ಮ ರಾಜ್ಯ ವಾಳಹತ್ತಿದರು. ಅವರು ನಮ್ಮ ದೇಶವನ್ನು ಆಳಹತ್ತಿದಂದಿನಿಂದ ನಮಗೆ ಬಹಳೇ ಸುಖಗಳು ಲಭಿಸಿರುತ್ತವೆ. ಮೊದಲಿನ ನಮ್ಮ ದೇಶದ ಇತಿಹಾಸವನ್ನು ಓದಿನೋಡಲಾಗಿ ಆಗಿನ ರಾಜರ ಆಳುವಿಕೆಯಿಂದ ನಮ್ಮ ಪೂರ್ವಜರಿಗೆ ಯಾವ ರೀತಿಯಿಂದಲೂ

ಎಳ್ಳಷ್ಟಾದರೂ ಸುಖ ವಿದ್ದಿಲ್ಲೆಂದು ಕಂಡು ಬರುತ್ತದೆ. ಆದರೆ ಈ ಕಾಲಕ್ಕ ಎಲ್ಲಕಡೆಯಲ್ಲಿ ಶಾಂತಿಯೂ ಸುಖವೂ ನೆಲೆಗೊಂಡಿರುತ್ತವೆ. ಹಾಗು ಮುಂದೆ ಇದಕ್ಕೂ ಹೆಚ್ಚಿನ ಸುಖಗಳು ನಮಗೆ ದೊರೆಯುವದರ ವಿಷಯವಾಗಿ ಸರಕಾರದಿಂದ ಯತ್ನಗಳು ನಡೆದಿರುತ್ತವೆ. ಈಗ ನಮ್ಮ ವ್ಯವಹಾರದಲ್ಲಿ ನಡೆಯುವ ಕೆಲ ಕೆಲವು ಸಂಗತಿಗಳು ಮಹತ್ವವುಳ್ಳವುಗಳೆನಿಸುವದಿಲ್ಲ. ಆದರೆ ಅವುಗಳ ಬಗ್ಗೆ ಚನ್ನಾಗಿ ವಿಚಾರಿಸಿದಲ್ಲಿ, ಅವುಗಳ ಉಪಯೋಗ ಎಷ್ಟು ಅದೆ ? ಎಂಬುವದು ಸಹಜವಾಗಿ ತಿಳಿಯುವದು ನಮ್ಮ ದೇಶದ ವ್ಯಾಪಾರವು ದಿನದಿನಕ್ಕೆ ಬೆಳೆಯುತ್ತ ನಡೆದಿರುತ್ತದೆ. ಯಾಕಂದರೆ, ಇಂಗ್ಲಿಷ ಸರಕಾರದವರು ಟಪಾಲಖಾತೆ ತಾರಖಾತೆ ಉಗಿಬಂಡಿ ಮುಂತಾದವುಗಳನ್ನು ಮಾಡಿರುತ್ತಾರೆ. ನಾವು ಇನ್ನೂ ಹೆಚ್ಚಿಗೆ ಬಲ್ಲವರೂ ಜಾಣರೂ ಆಗಬೇಕೆಂದು ನಾನಾತರದ ಶಾಲೆಗಳನ್ನು ಬೆಳೆಸುತ್ತಲಿದ್ದಾರೆ. ಇದು ನಮ್ಮಮೇಲೆ ರಾಜರ ಉಪಕಾರ ಎಷ್ಟೆಂದು ಹೇಳಬೇಕು ! ಪ್ರಜೆಗಳ ಆರೋಗ್ಯ ಹಿತಗಳ ದೆಶೆಯಿಂದ ಅಲ್ಲಲ್ಲಿಗೆ ದವಾಖಾನೆಗಳನ್ನು ಇಟ್ಟಿರುತ್ತಾರೆ. ಮೈಲೀತೆಗೆಯುವ ಹಾಗು ದನಗಳಿಗೆ ಔಷಧವನ್ನು ಕೊಡುವ ಸಂಸ್ಥೆಗಳನ್ನು ಸ್ಥಾಪಿಸಿರುತ್ತಾರೆ. ಒಕ್ಕಲತನದ ಕಡೆಗೆ ಪ್ರಜೆಗಳ ಲಕ್ಷವು ಕಡಿಮೆಯಾಗುತ್ತ ನಡೆದ ಕಾರಣಾ ಕೃಷಿಕರ್ಮದ ಖಾತೆಯನ್ನು ಸ್ಥಾಪಿಸಿ, ಅದರ ಉಪಯೋಗಮಾಡಿಕೊಳ್ಳುವ ಯಾವತ್ತು ರೀತಿಗಳನ್ನು ತೋರಿಸಿ. ರೈತರಿಗೆ ಪ್ರೋತ್ಸಾಹವನ್ನು ಕೊಡುತ್ತಲಿದ್ದಾರೆ. ಇದರ ಹೊರ್ತು ಹೊಸ ಕಲೆಗಳನ್ನು ಕಲಿಸಲಿಕ್ಕೂ ಅವರು ಸಿದ್ಧರಿದ್ದಾರೆ. ಪೂರ್ವಕಾಲದಲ್ಲಿ ಯಾರಿಗಾದರೂ ಒಂದು ಕಲೆಗೊತ್ತಿದ್ದರೆ ಅದನ್ನು ಎರಡನೇಯವರಿಗೆ ತಿಳಿಸಿದರೆ ಅದರ ಮಹತ್ವವು ಕಡಿಮೆ ಯಾಗುತ್ತದೆಂದು ತಿಳಿದು ಅದನ್ನು ಗುಪ್ತವಾಗಿ ಇಟ್ಟು ಸತ್ತು ಹೋಗುತ್ತಿದ್ದರು; ಆದರೆ ಈಗಿನ ಸ್ಥಿತಿಯು ಬೇರೆ ಯಾಗಿರುತ್ತದೆ. ಈಗ ಅಪೂರ್ವ ಕಲೆಗಳನ್ನು ಹುಡಿಕಿ ತೆಗೆದವರಿಗೆ ಬಹುಮಾನಮಾಡಿ ಅದನ್ನು ಪ್ರಸಾರ ಮಾಡಲಿಕ್ಕೆ ಉತ್ತೇಜನ ಕೊಡುತ್ತಾರೆ. ಮತ್ತು ಆ ಕಲೆಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವದಕ್ಕಾಗಿ ಯತ್ನೈಸುತ್ತಾರೆ. ಎಲ್ಲ ಜಾತಿಯವರಿಗೆ ಜಾತಿಭೇದವಿಲ್ಲದೆ ಉದ್ಯೋಗವನ್ನೂ ಅಭ್ಯಾಸವನ್ನೂ ಮಾಡುವ ಅನುಕೂಲ

ತೆಗಳನ್ನು ಮಾಡಿರುತ್ತಾರೆ. ಯೋಗ್ಯಪರೀಕ್ಷೆಗಳನ್ನು ಕೊಟ್ಟಲ್ಲಿ ಪಕ್ಷಪಾತವಿಲ್ಲದೆ ಬೇಕಾದ ಜಾತಿಯ ಜನರು, ಅಧಿಕಾರವುಳ್ಳ ಕೆಲಸಗಳನ್ನು ಪಡೆಯ ಬಹುದು. ಈ ರಾಜ್ಯದಲ್ಲಿ ಪ್ರಜೆಗಳಿಗೆ ಇಂದಿನವರೆಗೆ ದೊರೆದ ಹಾಗು ಮುಂದೆ ದೊರೆಯುವ ಹಕ್ಕುಗಳು, ಹಿಂದುಸ್ಥಾನದ ಮೊದಲಿನ ಯಾವರಾಜರ ಕಾಲದಲ್ಲಿಯೂ ದೊರೆತಿದ್ದಿಲ್ಲ. ಇದರಿಂದ ಬ್ರಿಟಿಶ ಸಾಮ್ರಾಜ್ಯದಲ್ಲಿ ಸುಖಶಾಂತಿಗಳು ಸಂಪೂರ್ಣವಾಗಿ ನೆಲೆಗೊಂಡಿರುತ್ತವೆಂಬದು ಸಹಜ ಸಿದ್ಧವಾಗುತ್ತದೆ.

---

೨ ಬ್ರಿಟಿಶ ರಾಜ್ಯದ ವಿಸ್ತಾರ.

ಬ್ರಿಟಿಶ ಸಾಮ್ರಾಜ್ಯವು ಪೃಥ್ವಿಯ ಎಲ್ಲ ಭಾಗಗಳಲ್ಲಿಯೂ ಇರುವದರಿಂದ ಅವರ ರಾಜ್ಯದಲ್ಲಿ ಸೂರ್ಯನು ಎಂದೂ ಅಸ್ತನಾಗುವದಿಲ್ಲ. ಇಡೀ ಜಗತ್ತಿನ ಕ್ಷೇತ್ರಫಲವು ೫೫೦೦೦,೦೦೦ ಚೌರಸ ಮೈಲು ಇರುತ್ತದೆ. ಮತ್ತು ಜನಸಂಖ್ಯೆಯು ೧೮೦೦೦,೦೦೦,೦೦ ಇರುತ್ತದೆ. ಇದರಲ್ಲಿ ಬ್ರಿಟಿಶ ಸಾಮ್ರಾಜ್ಯವು ೧೧೪೦೦೦,೦೦ ಚೌರಸ ಮೈಲು ಇರುತ್ರದೆ. ಹಾಗು ಜನಸಂಖ್ಯೆಯು ೪೧೯೦೦೦,೦೦ ಇರುತ್ತದೆ. ಇದರಿಂದ ಕಂಡು ಬರುವದೇನಂದರೆ ಜಗತ್ತಿನ ಒಂದು ಐದಾಂಶ ಭಾಗದಕಿಂತಲು ಸ್ವಲ್ಪ ಹೆಚ್ಚು ಭಾಗವು ಬ್ರಿಟಿಶಸಾಮ್ರಾಜ್ಯಾಧಿಪತ್ಯದ ಕೆಳಗೆ ಇರುತ್ತದೆ. ಇಂಥ ವೈಭವವುಳ್ಳ ಹಾಗು ವಿಸ್ತಾರವಾದ ಸಾಮ್ರಾಜ್ಯವು ಇಡೀ ಭೂಮಂಡಲದಲ್ಲಿ ಮತ್ತ್ಯಾವದೂ ಇಲ್ಲೇಇಲ್ಲವೆಂದು ಹೇಳಬಹುದು.

---

೩. ಹಿಂದುಸ್ಥಾನ

ಈ ವಿಸ್ತಾರವಾದ ದೇಶದ ಕ್ಷೇತ್ರಫಲವು ಹದಿನೈದು ಲಕ್ಷ ಚೌರಸಮೈಲು ಇರುತ್ತದೆ. ಜನಸಂಖ್ಯೆಯು ಸುಮಾರು ೩೨ ಕೋಟಿ

ಇರುತ್ತದೆ. ಇದರಲ್ಲಿ ನಮ್ಮ ದೇಶಿಯ ಅರಸರ ಸಂಸ್ಥಾನಗಳು ೬೯೩ ಇರುತ್ತವೆ. ಅವುಗಳ ಕ್ಷೇತ್ರ ೮೨೪೦೦೦ ಚೌರಸ ಮೈಲು, ಜನಸಂಖ್ಯೆ ೬೮೦೦೦,೦೦೦ ಇರುತ್ತದೆ. ಈ ಯಾವತ್ತು ಹಿಂದುಸ್ಥಾನ ಸಾಮ್ರಾಜ್ಯವು ಮುಂಚೆ ಯಾವ ಏಕಚಕ್ರವರ್ತಿಯ ಅಧಿಪತ್ಯದ ಕೆಳಗೂ ಇದ್ದಿದ್ದಿಲ್ಲ; ಆದರೂ ಎಷ್ಟೋ ವರ್ಷಗಳ ಹಿಂದೆ, ಅಭಿಮನ್ಯುವಿನ ಮಗನಾದ ಪರೀಕ್ಷಿತನ ಮಗ ಜನಮೇಜಯನೆಂಬ ರಾಜನು ಮಾತ್ರ ಈ ನಮ್ಮ ಇಡೀ ಭರತಖಂಡವನ್ನು ಆಳಿದನೆಂದು ಪುರಾಣಗಳಿಂದ ಪ್ರಸಿದ್ಧವಾಗಿರುತ್ತದೆ. ಆನಂತರ ವಿಕ್ರಮಾದಿತ್ಯ ಶಾಲಿವಾಹನ ಮುಂತಾದ ಮಹಾಪರಾಕ್ರಮಿಗಳಾದ ಅರಸರು ಆಗಿ ಹೋದರು ಆದರೂ ಅವರ ಆಧಿಪತ್ಯದ ಕೆಳಗೆ ಭಾರತೀಯರ ಈ ಇಡೀ ದೇಶವು ಎಂದೂ ಬರಲಿಲ್ಲ. ಅವರ ತರುವಾಯ ಎಷ್ಟೋ ಶತಮಾನಗಳಾದ ಬಳಿಕ ಮುಸಲ್ಮಾನರು, ಹಿಂದಸ್ಥಾನದಲ್ಲಿ ತಮ್ಮ ಸಾಮಿತ್ವವನ್ನು ನೆಲೆಗೊಳಿಸಿ, ಹಿಂದುಸ್ಥಾನದ ಬಾದಶಹರೆಂದೆನ್ನಿಸಿಕೊಂಡು ಸುಮಾರು ೭೦೦ ವರ್ಷಗಳವರೆಗೆ ಈ ದೇಶದ ಕೆಲವು ಭಾಗವನ್ನು ಮಾತ್ರ ಆಳಿ ಸುಖವನ್ನು ಪಡೆದರು; ಆದರೂ ಅವರಿಂದ ಈ ದೇಶಕ್ಕೆ ಲೇಶ ಮಾತ್ರವೂ ಸುಖವುಲಭಿಸಲಿಲ್ಲ. ಅವರ ತರುವಾಯ ಸುಮಾರು ಆರುಸಾವಿರ ಮೈಲುಗಳಾಚೆಯಲ್ಲಿರುವ ಈ ನಮ್ಮ ದಯಾಳುಗಳಾದ ಆಂಗ್ಲೆಯರು ಬಂದು ಈ ಇಡೀ ರಾಷ್ಟ್ರವನ್ನು ತಮ್ಮ ಕೈಕೆಳಗೆ ಸೇರಿಸಿಕೊಂಡು ಕಡೆಗೆ ಇಲ್ಲಿ ತಮ್ಮ ಸಾಮ್ರಾಜ್ಯವನ್ನುಂಟುಮಾಡಿ ಈಗ್ಯೆ ಜನರ ಸುಖಕ್ಕಾಗಿ ಅಹೋರಾತ್ರಿಯಲ್ಲಿಯೂ ಶ್ರಮಬಡುತ್ಕಲಿದ್ದಾರೆ. ಆದ್ದರಿಂದ ಜಗನ್ನಿಯಾಮಕನು ಜನರ ಏಳ್ಗೆಗಾಗಿಯೇ ಈ ನಮ್ಮ ದಯಾಳುಗಳಾದ ಆಂಗ್ಲಪ್ರಭುಗಳಿಗೆ ಈ ಸಾಮ್ರಾಜ್ಯವನ್ನು ಕೊಟ್ಟಿರುತ್ತಾನೋ ಏನೋ ಅನ್ನುವಂತೆ ತೋರುತ್ತದೆ. ಈ ಪ್ರಕಾರ ದಯಾಳುಗಳಾದ ಇಂಗ್ಲಿಷರ ಪ್ರಭುತ್ವವು ನಮ್ಮಮೇಲೆ ಚಿರಕಾಲವಿರಲೆಂದು ನಾವೆಲ್ಲರು ಆ ದಯಾಭರಿತನಾದ ಪರಮೇಶ್ವರನನ್ನು ಯಾವಾಗಲೂ ಹಾಡಿ ಹರಿಸಲಿಕ್ಕೆ ಬೇಕು.

---

೪. ರಾಜ್ಯವಿಭಾಗ.

ಪ್ರಜೆಗಳ ಶಾಂತಿಸುಖಕ್ಕಾಗಿಯೂ, ರಾಜ್ಯಪರಿಪಾಲನೆಯ ಅನಕೂಲತೆಗಾಗಿಯೂ ಸರಕಾರದವರು ಹಿಂದುಸ್ಥಾನದಲ್ಲಿ ಒಟ್ಟಿಗೆ ಹದಿನಾಲ್ಕು ಭಾಗಗಳನ್ನು ಮಾಡಿ, ಪ್ರಾಂತಗಳೆಂತಲೂ ಇಲಾಖೆಗಳೆಂತಲೂ ಹೆಸರುಗಳನ್ನಿಟ್ಟು, ಆಯಾ ಭಾಗಗಳಿಗೆ ಗವ್ಹರ್ನರ, ಲೆಫ್ಟನೆಂಟ ಗವ್ಹರ್ನರ, ಚೀಫ್ ಕಮಿಶನರ ಮುಂತಾದ ದೊಡ್ಡ ದೊಡ್ಡ ಅಧಿಕಾರಿಗಳನ್ನು ನೇಮಿಸಿರುತ್ತಾರೆ; ಇವರೆಲ್ಲರ ಮೇಲೆ ಒಬ್ಬ ಮುಖ್ಯಾದಿಕಾರಿಯು ಇರುತ್ತಾನೆ; ಅವನಿಗೆ ಗವ್ಹರ್ನರ ಜನರಲ್‌ನೆಂಬ ಹೆಸರು. ಈ ಮೇಲಿನ ಮುಖ್ಯ ಭಾಗಗಳಲ್ಲಿ ೨೬೭ ಅವಾಂತರಭಾಗಗಳನ್ನು ಮಾಡಿ, ಅವುಗಳನ್ನು ಕಲೆಕ್ಟರರೆಂಬವರ ಆಧೀನಕ್ಕೆ ಕೊಟ್ಟಿರುತ್ತಾರೆ. ಇದೇಮೇರೆಗೆ ಖಾತೆಗಳ ಅಧಿಕಾರಸ್ಥರಿಗೆ ಅನುಕೂಲವಾಗುವಂತೆ ಎಷ್ಟೋ ಭಾಗಗಳನ್ನು ಮಾಡಿರುತ್ತಾರೆ. ಇದರಿಂದ ಪ್ರಜೆಗಳಿಗೆ ಸೌಖ್ಯವಾಗುತ್ತದೆ. ಮತ್ತು ಎಲ್ಲರಿಗೂ ಯೋಗ್ಯವಾದ ನ್ಯಾಯವು ದೊರೆಯುತ್ತದೆ.

---

೫. ಹಿಂದುಸ್ಥಾನವನ್ನಾಳಿದ ಇಂಗ್ಲಂಡದ ಅರಸು.

ನಮ್ಮ ಸಂಪೂರ್ಣ ಹಿಂದುಸ್ಥಾನದ ರಾಜ್ಯಸೂತ್ರಗಳು, ಪರಮ ಪುಣ್ಯಶಾಲಿಯೂ, ವೈಭವಶಾಲಿಯೂ ಆದ ಕೈಲಾಸವಾಸಿ ವ್ಹಿಕ್ಟೋ

ರಿಯಾ ಮಹಾರಾಣಿಯವರ ಕೈಯಲ್ಲಿ ಸನ ೧೮೫೮ ನೇ ಇಸವಿಯಲ್ಲಿ ಬಂದವು; ಸನ್ನ ೧೮೭೭ ನೇ ಇಸವಿಯಲ್ಲಿ ಅವರು ನಮ್ಮ ಹಿಂದುಸ್ಥಾನದ ಸಂಬಂಧದಿಂದ **ಕೈಸರ-ಈ-ಹಿಂದ**, ಎಂಬ ದೊಡ್ಡ ಪದವಿಯನ್ನು ಧರಿಸಿದರು. ಆ ಕಾಲಕ್ಕೆ ಹಿಂದುಸ್ಥಾನದ ಗವ್ಹರ್ನರ ಜನರಲ್‌ರಾಗಿದ್ದ ಲಾರ್ಡ ಲಿಟನ್‌ಸಾಹೇಬರು ದಿಲ್ಲಿಯಲ್ಲಿ ಒಂದು ದೊಡ್ಡ ದರಬಾರವನ್ನು ಕೂಡಿಸಿದರು.

ಈ ನಮ್ಮ ಪರಮ ದಯಾಳು ವಿಕ್ಟೋರಿಯಾ ಮಹಾರಾಣಿಸಾಹೇಬರವರು, ಸನ್ನ೧೯೦೧ನೇ ಇಸವಿಯಜಾನೇವಾರಿ ೨೨ನೇ ತಾರೀಖಿಗೆ ಪರಲೋಕವನ್ನೈದಿದರು. ಅವರ ತರುವಾಯ ಅವರ ಜ್ಯೇಷ್ಠ ಪುತ್ರರಾದ ಸಪ್ತಮ ಎಡ್ವರ್ಡಮಹಾರಾಜರು ಇಂಗ್ಲಂಡದ ಪಟ್ಟವನ್ನೇರಲು, ಇಡೀ ಸಾಮ್ರಾಜ್ಯಸೂತ್ರಗಳು ಇವರ ಕೈ ಸೇರಿದವು. ಇಂಗ್ಲಂಡದಲ್ಲಿ ಇವರಿಗೆ ರಾಜ್ಯಾಭಿಷೇಕವಾದ ಬಳಿಕ ಮುಂದೆ ೧೯೦೩ನೇ ಇಸವಿಯ ಜಾನೇವಾರಿ ೧ ನೇ ತಾರೀಖಿನ ದಿವಸ ದಿಲ್ಲಿಯಲ್ಲಿ ಆಗಿನ ಕಾಲದ ವ್ಹಾಯ್ಸರಾಯರಾದ ಲಾರ್ಡ ಕರ್ಝನ್ ದೊರೆಗಳು ಬಹಳೇ ಅಟ್ಟಹಾಸದಿಂದ ಒಂದು ದೊಡ್ಡ ದರಬಾರವನ್ನು ಕೂಡಿಸಿದರು.

ಮುಂದೆ ಕೆಲವು ವರ್ಷಗಳವರೆಗೆ ರಾಜ್ಯಪರಿಪಾಲನೆಯನ್ನು ಬಹು ಶಾಂತತೆಯಿಂದ ನಡಿಸಿ, ನಮ್ಮ ಸಪ್ತಮ ಎಡ್ವರ್ಡ ಬಾದಶಹರು ಸನ್ನ ೧೯೧೦ ಇಸವಿಯ ಮೇ ತಿಂಗಳ ೬ ನೇ ತಾರೀಖಿನ ದಿವಸ ವಿಲಾಯತಿಯಲ್ಲಿ ಸ್ವರ್ಗಸ್ಥರಾದರು. ಬಹು ಲೋಕಪ್ರಿಯರಾದ ಈ ಚಕ್ರವರ್ತಿಗಳ ಮರಣದಿಂದ ಇವರ ಆಪ್ತೇಷ್ಟರಿಗೆ ಪರಮ ಕಷ್ಟವಾದದ್ದಲ್ಲದೆ, ಇವರ ಸಾಮ್ರಾಜ್ಯದೊಳಗಿನ ಸಕಲ ಜನರು ದುಃಖಸಾಗರದಲ್ಲಿ ಮುಳುಗಿ ಹೋದರು. ಇವರು ಯಾವತ್ತು ಅರಸರ ಸ್ನೇಹ ಬಳಿಸಿ ಎಲ್ಲ ಕಡೆಗೂ ಶಾಂತತೆಯನ್ನು ನೆಲೆಗೊಳಿಸಿದ್ದರಿಂದ, ಅವರಿಗೆ “ **ಪೀಸ ಮೇಕರ** ” ಎಂಬ ಬಹುಮಾನದ ಅಭಿಧಾನವು ದೊರೆಯಿತು.

೬. ನಮ್ಮ ಚಕ್ರವರ್ತಿಗಳಾದ ಪಂಚಮ ಜಾರ್ಜ ದೊರೆಗಳ ಸಂಕ್ಷಿಪ್ತ ಚರಿತ್ರವು.

ನಮ್ಮ ಸಾಂಪ್ರತ ಚಕ್ರವರ್ತಿಗಳಾದ ಪಂಚಮ ಜಾರ್ಜ ದೊರೆಗಳು, ಇಂಗ್ಲಂಡದಲ್ಲಿ **ಮಾರ್ಲಬರೋ** ಎಂಬ ಅರಮನೆಯಲ್ಲಿ ೧೮೬೫ನೇ ಇಸವಿಯ ಜೂನ ತಿಂಗಳ ೩ ನೇ ತಾರೀಖಿನ ದಿವಸ, ಜನ್ಮವನ್ನು ಹೊಂದಿದರು. ಇವರಿಗೆ ಮೊದಲು ಜಾರ್ಜ ಫ್ರೆಡರಿಕ್ ಅರ್ನೆಸ್ತ ಎಂಬ ಹೆಸರನ್ನಿಟ್ಟಿದ್ದರು. ಇವರು ನಮ್ಮ ಸಪ್ತಮ ಎಡ್ವರ್ಡಬಾದಶಹರವರ ದ್ವಿತೀಯ ಪುತ್ರರು. ಇವರು ಚಿಕ್ಕಂದಿನಲ್ಲಿ ಸ್ವಲ್ಪ ವಿದ್ಯಾಭ್ಯಾಸವನ್ನು ಮಾಡಿದ ಬಳಿಕ, ನೌಕಾವಿದ್ಯೆಯ ಕಡೆಗೆ ಇವರ ಮನಸು ಎಳೆಯಿತು. ಆದಕಾರಣ ಇವರು ಬ್ರಿಟಾನಿಯಾ ಎಂಬ ಉಗಿಹಡಗದಲ್ಲಿ ಕೆಲಸಕ್ಕೆ ನಿಂತರು. ವ್ಹಿಕ್ಟೋರಿಯಾ ಚಕ್ರವರ್ತಿನಿಯವರ ಆಳಿಕೆಯಲ್ಲಿ ನಮ್ಮ ಜಾರ್ಜ ದೊರೆಗಳವರ ಅಣ್ಣಂದಿರಾದ ಯುವರಾಜ ಪ್ರಿನ್ಸ ವ್ಹಿಕ್ಟರ ಎಂಬವರು, ಸನ್ನ ೧೮೯೨ ನೇ ಇಸವಿಯ ಜನೆವರಿ ತಿಂಗಳ ೧೪ ನೇ ತಾರೀಖಿನ ದಿವಸ ಮೃತ ಪಟ್ಟಿದ್ದರಿಂದ, ನಮ್ಮ ಈಗಿನ ಚಕ್ರವರ್ತಿ ದೊರೆಗಳೇ ಯುವರಾಜರಾದರು. ಇವರು ಬ್ರಿಟಾನಿಯಾ ಹಡಗದಲ್ಲಿ ನಾವಿಕರಾಗಿ ಕೆಲಸ ಮಾಡುತ್ತಿದ್ದಾಗ, ತಾವು ರಾಜಪುತ್ರರೆಂಬ ಅಭಿಮಾನವನ್ನು ಎಳ್ಳಷ್ಟಾದರೂ ಹಿಡಿಯುತ್ತಿದ್ದಿಲ್ಲ. ಇವರು ತಮ್ಮ ಕೆಲಸದಲ್ಲಿ ದಕ್ಷತೆಯುಳ್ಳವರಾದ್ದರಿಂದಲೂ ತಮ್ಮ ಜೊತೆಯವರೊಡನೆ ಪ್ರೀತಿಯಿಂದ ಕೆಲಸವನ್ನು ಸಾಗಿಸುತ್ತಿದ್ದದರಿಂದಲೂ ಇವರ ಜೊತೆಯವರು ಇವರ ವಿಷಯದಲ್ಲಿ ಬಹಳೇ ನಿಷ್ಠೆಯುಳ್ಳವರಾಗಿದ್ದರು. ಏಳನೇ ಎಡ್ವರ್ಡ ಮಹಾರಾಜರು ಪಟ್ಟವನ್ನೇರಿದ ಬಳಿಕ ಇವರೇ ಯುವರಾಜರಾದರು.ಆದರಿಂದ ಜಾರ್ಜದೊರೆಗಳು ತಮ್ಮ ನೌಕಾ ಕೆಲಸವನ್ನು

ಬಿಟ್ಟು ಬಿಡಬೇಕಾಯಿತು. ಆಗ ಇವರು ಹಡಗು-ಪಡೆಯ ಮುಖ್ಯಸ್ಥರಾಗಿದ್ದದ್ದಲ್ಲದೆ, ಎಲ್ಲ ದೇಶಗಳಲ್ಲಿ ಸಂಚಾರಮಾಡಿ ಬಂದದರಿಂದ, ಆಯಾ ದೇಶಗಳ ವಿಷಯವಾಗಿ ಇವರಿಗೆ ಸಂಪೂರ್ಣ ಸಂಗತಿಗಳು ಗೊತ್ತಾಗಿದ್ದವು. ಸನ್ನ ೧೮೯೩ನೇ ಇಸವಿಯ ಜುಲಾಯಿ ೧೬ ನೇ ತಾರೀಖಿನ ದಿವಸ "ಡ್ಯೂಕ್ ಆಫ್ ಕೆಂಟ" ಎಂಬ ಸರದಾರರ ಪ್ರಿಯ ಕನ್ನಿಕೆಯಾದ **ಮೇರೀ** ಎಂಬವರಗೂಡ ಇವರ ಲಗ್ನವಾಯಿತು. ಇವರೇ ಈಗಿನ ಮಹಾರಾಜ್ಞಿಯುವರು.

೨. ವಿಲಾಯತಿಯಲ್ಲಿ ಜಾರ್ಜ ಚಕ್ರವರ್ತಿಯ ರಾಜ್ಯಾರೋಹಣ ಸಮಾರಂಭವು.

ಘನತೆಯುಳ್ಳ ಪ್ರಿಯ ತಂದೆಯುವರಾದ ಏಳನೇ ಎಡ್ವರ್ಡ ಚಕ್ರವರ್ತಿಯುವರ ತರುವಾಯ, ಯುವರಾಜರಾದ ಜಾರ್ಜರವರು ಪಂಚಮ ಜಾರ್ಜರೆಂಬ ಹೆಸರನ್ನು ಧರಿಸಿ, ಇಂಗ್ಲಂಡದಲ್ಲಿ ಸನ್ ೧೯೧೧ಇಸವಿಯ ಜೂನ ತಿಂಗಳ ೨೨ನೇ ತಾರೀಖಿನ ದಿವಸ ವಿಧಾನಪೂರ್ವಕವಾಗಿ ಅಷ್ಟೈಶ್ವರ್ಯದೊಡನೆ ಪಟ್ಟಾಭಿಷೇಕವನ್ನು ಹೊಂದಿದರು. ಆಕಾಲಕ್ಕೆ ಹಿಂದುಸ್ಥಾನದಿಂದ ಎಷ್ಟೋ ಹಿಂದೂರಾಜರು ಅವರ ರಾಜ್ಯಾಭಿಷೇಕದ ಸಮಾರಂಭಕ್ಕೆ ಹೋಗಿದ್ದರು. ಇವರ ವಿಷಯುವಾಗಿಯೂ ಹಿಂದೂ ಪ್ರಜೆಗಳ ವಿಷಯುವಾಗಿಯೂ ಆಕಾಲಕ್ಕೆ ನಮ್ಮ ಪಂಚಮ ಜಾರ್ಜ ಚಕ್ರವರ್ತಿಯುವರು ಬಹಳೇ ಪೂಜ್ಯಬುದ್ಧಿಯುನ್ನು ತೋರಿಸಿ ಆದರಾತಿಥ್ಯವನ್ನೂ ಮಾಡಿದರು.

೮. ಜಾರ್ಜಮಹಾರಾಜರು ರಾಜ್ಞಿಯವ ರೊಡನೆ ಮುಂಬಯಿಗೆ ಆಗಮನ ಮಾಡಿದ್ದು.

ಚಕ್ರವರ್ತಿಯವರು ತಾರೀಖು ೧೧ ನೇ ನವಂಬರ ಸನ್ನ ೧೯೧೧ ಇಸವಿಯ ದಿವಸ ಇಂಗ್ಲಂಡವನ್ನು ಬಿಟ್ಟು, ಬಹು ಸಂಭ್ರಮದಿಂದಲೂ ಸಡಗರದಿಂದಲೂ ತಾರೀಖು ೨ನೇ ದಿಶೆಂಬರ ಸನ್ನ ೧೯೧೧ ನೇ ಇಸವಿಯ ದಿವಸ ಮುಂಬಯಿಯಲ್ಲಿ ಅಪೋಲೋ ಬಂದರಕ್ಕೆ ಬಂದು ತಲುಪಿದರು. ಆಗ ಹಿಂದುಸ್ತಾನದ ಗವ್ಹರ್ನರ ಜನರಲ್‌ರೂ ಮುಂಬಯಿ ಗವ್ಹರ್ನರರೂ ಸೇನೆಸನ್ನಾಹದೊಡನೆಯೂ ವಾದ್ಯಘೋಷದೊಡನೆಯೂ ಪರಿವಾರವನ್ನೊಡಗೂಡಿ, ಮಾಂಡಲಿಕ ರಾಜರಾದ ಏತದ್ದೇಶೀಯ ಅರಸರನ್ನೊಡಗೊಂಡು, ರಾಜದಂಪತಿಗಳನ್ನು ಬಹು ಸ್ವಾಗತದಿಂದ ಅಪೋಲೋ ಬಂದರದ ಹತ್ತರ ಕಟ್ಟಿದ ಭವ್ಯವಾದ ಮಂಟಪಕ್ಕೆ ಕರಕೊಂಡು ಬಂದರು. ಆ ಮಂಟಪದಲ್ಲಿ ಚಕ್ರವರ್ತಿಗಳ ಸಲುವಾಗಿಯೂ ಅವರ ಪ್ರಿಯ ಪತ್ನಿಯರಾದ ಮಹಾರಾಜ್ಞಿ ಮೇರಿಯವರ ಸಲುವಾಗಿಯೂ ಎರಡು ದಿವ್ಯವಾದ ಸಿಂಹಾಸನಗಳನ್ನು ಮಾಡಿದ್ದರು. ಅಲ್ಲಿಗೆ ಈ ಸಾರ್ವಭೌಮರು ತಮ್ಮ ಪತ್ನಿಯವರೊಡನೆ ಬಂದು ಸಿಂಹಾಸನಗಳನ್ನು ಆರೋಹಣ ಮಾಡಿದರು. ಆ ಕಾಲಕ್ಕೆ ಆದ ಸನ್ಮಾನ ಸೂಚಕವಾದ ತೋಫು ತುಬಾಕಿಗಳಿಂದಲೂ, ನಾನಾತರದ ವಾದ್ಯಗಳ ಧ್ವನಿಯಿಂದಲೂ ಎಂಟೂ ದಿಕ್ಕುಗಳೆಲ್ಲ ತುಂಬಿ ಹೋದವು. ಎತ್ತ ನೋಡಿದತ್ತ ಆನಂದೋ ಆನಂದವಾಯಿತು. ಆಗ ಚಕ್ರವರ್ತಿಯವರು ತಮ್ಮ ಸಿಂಹಾಸನದಿಂದ ಎದ್ದು ನಿಂತು, ಎಲ್ಲ ಮಂತ್ರಿ ಮುಂತಾದವರನ್ನೂ ಪ್ರೇಕ್ಷಕರನ್ನೂ ಆನಂದದಿಂದ ಕಣ್ತುಂಬ ನೋಡಿ, ಸಮಯೋಚಿತವಾದ ಭಾಷಣ ಮಾಡಿದರು. ಆ ಕಾಲಕ್ಕೆ ಅಷ್ಟೈಶ್ವರ್ಯಗಳಿಂದಒಪ್ಪುತ್ತಿರುವಂಥಾ ಸಾರ್ವಭೌಮರಾಜರವರ ಮುಖಚಂದ್ರನನ್ನು ನೋಡಿ, ಎಲ್ಲರ ಮುಖಗಳು ಆನಂದೋಲ್ಲಾಸಗಳಿಂದ ಪ್ರಫುಲ್ಲಿತವಾಗಿದ್ದವು.

ತರುವಾಯ, ಚಿತ್ರ ವಿಚಿತ್ರವಾಗಿ ಶೃಂಗರಿಸಿದ ಒಂದು ಮನೋಹರವಾದ ರಥದಲ್ಲಿ ಕುಳಿತು, ಸಾರ್ವಭೌಮರು ಪ್ರಿಯ ಪತ್ನಿಯವರೊಡನೆಯೂ, ಮಂತ್ರಿಸೇನೆ ಸನ್ನಾಹದೊಡನೆಯೂ ಧ್ವಜಪತಾಕೆಗಳೊಡನೆಯೂ ಪಟ್ಟಣದ ದೊಡ್ಡ ದೊಡ್ಡ ಬೀದಿಗಳೊಳಗಿಂದ ಹಾಯ್ದು, ಪಟ್ಟಣಿಗರಿಗೆ ತಮ್ಮ ದರ್ಶನವನ್ನು ಕೊಟ್ಟರು. ಆ ಬೀದಿಗಳ ಎರಡೂ ಬದಿಗಳಲ್ಲಿ ಶಿಪಾಯರೂ ಸ್ವಾರರೂ ತಮ್ಮ ತಮ್ಮ ಅಯುಧಗಳೊಡನೆ ಸಾಲಾಗಿ ನಿಂತಿದ್ದರು. ಪಟ್ಟಣವೆಲ್ಲ ಧ್ವಜಪತಾಕೆಗಳಿಂದಲೂ ತಳಿರು ತೋರಣಗಳಿಂಲೂ ಶೃಂಗರಿಸಲ್ಪಟ್ಟಿತ್ತು. ಬಾದಶಹರ ಮುಂಬಾಗದಲ್ಲಿ ತೋಫುತುಬಾಕಿಗಳೂ, ಬ್ಯಾಂಡ್ ಬಾಜಾಗಳೂ, ಮಧುರವಾದ ಸಾರಂಗ ಪಿಟಿಲುಗಳೂ, ಇಂಪಾದ ಧ್ವನಿಗಳನ್ನು ಕೊಡುತ್ತಿರುವ ಸುರಸವಾದ ಸಂಗೀತಗಳೂ, ರಾಷ್ಟ್ರೀಯ ಗೀತಗಳೂ, ಅಷ್ಟದಿಕ್ಕುಗಳನ್ನು ಗದ್ದರಿಸಿ ಬಿಟ್ಟವು. ಸಾರಾಂಶ, ಈ ಮೆರವಣಿಗೆಯ ವರ್ಣನೆಯನ್ನು ಏಷ್ಟು ಮಾಡಿದರೂ ಕಡಿಮೆಯೇಸರಿ.

ಇದೇ ಮೇರೆಗೆ ಬಾದಶಹರು ಪುನಃ ಸಾಯಂಕಾಲಕ್ಕೆ ತೆರಳಿ ಉಗಿಹಡಗವನ್ನು ಸೇರಿದರು. ಅಗ ಮುಂಬಯಿ ಪಟ್ಟಣವು ದೀಪೋತ್ಸವಗಳಿಂದ ಶೃಂಗರಿಸಲ್ಪಟ್ಟಿತ್ತು. ಈ ದೀಪೋತ್ಸವಗಳಿಂದ ರಾತ್ರಿಯು ಬಹು ಮನೋಹರವಾಗಿ ಕಾಣಿಸುತ್ತಿತ್ತು. ಎತ್ತ ನೋಡಿದತ್ತ ದೀಪಗಳು ಕೆಂಪು, ಹಳದಿ, ಹಸರು, ನೀಲಿ ಮುಂತಾದ ತರತರದ ಬಣ್ಣಗಳಿಂದ ಪ್ರಕಾಶಿಸುತ್ತಿದ್ದವು. ಮ್ಯುನಿಸಿಪಾಲ್ ಕಚೇರಿಯ ಎದುರಿನ ಪಟಾಂಗಣದಲ್ಲಿ ಹಳೇ ಮುಂಬಯಿ ಎಂಬದೊಂದು ಪ್ರದರ್ಶನವನ್ನು ಮಾಡಿದ್ದರು, ಅದರಲ್ಲಿ ನಾನಾತರದ ಆಟನೋಟಗಳು ದೃಗೋಚರವಾಗುತ್ತಿದ್ದವು. ಒಬ್ಬ ಇಂಗ್ಲಿಷಗೃಹಸ್ಥನು ಅರಿವಿಯಿಂದ ಹಿಮಾಲಯ ಪರ್ವತವನ್ನು ಮಾಡಿ, ಅದರ ಮೇಲೆ ವಿದ್ಯುಚ್ಛಕ್ತಿಯಿಂದ ಬಂಡಿಗಳು ನಡೆಯುವಂತೆ ಲೋಹ ಮಾರ್ಗವನ್ನು ಮಾಡಿದ್ದನು; ಅದರಲ್ಲಿ ಕೂಡ್ರುವವರಿಗೆ ಒಂದು ರೂಪಾಯಿ ಫೀ ಕೊಡಬೇಕಾಗುತ್ತಿತ್ತು. ಈ ಬಂಡಿಯು ಸುಮಾರು ಒಂದು ಮೈಲಿನವರೆಗೆ ಬೋಗದೆಗಳೊಳಗಿಂ

ದಲೂ ಏರು ಇಳುಕಲುಗಳ ಮೇಲಿಂದಲೂ ಹೋಗಿ, ಹೊರಟ
ಸ್ಥಳಕ್ಕೆ ೫ ಮಿನಿಟುಗಳಲ್ಲಿ ತಿರುಗಿ ಬರುತ್ತಿತ್ತು.

ಬಾದಶಹರು ಮತ್ತು ರಾಜ್ಞಿಯವರು ವಿದ್ಯಾವ್ಯಾಸಂಗಿಗಳಾದ
ದರಿಂದ, ವಿದ್ಯಾರ್ಥಿಗಳನ್ನು ಈ ಸಮಾರಂಭಕ್ಕೆ ಕರಿಸಿ, ಅವರ ಮುಖ
ಗಳಿಂದ ಸುರಸವಾದ ಗಾಯನಗಳನ್ನು ಕೇಳಿ ಸಂತೋಷಬಟ್ಟು,
ಯಾವತ್ತು ವಿದ್ಯಾರ್ಥಿಗಳಿಗೆ ಮಿಠಾಯಿ ಕೊಟ್ಟರು. ವಿದ್ಯಾರ್ಥಿ
ಗಳು ಬಾದಶಹರ ಮತ್ತು ರಾಜ್ಞಿಯವರ ಮುಂದೆ ಕೌತುಕದ
ಆಟನೋಟಗಳನ್ನು ಮಾಡಿ ತೋರಿಸಿದರು. ರಾತ್ರಿಯಕಾಲಕ್ಕೆ
ಮದ್ದಿನ ಕೆಲಸವು ಬಹಳೇ ಪ್ರೇಕ್ಷಣೀಯವಾದದ್ದಿತ್ತು. ಔಟುಗಳು
ಹಾರಿದಕೂಡಲೆ ಅವುಗಳೊಳಗಿಂದ ಮುಗಿಲಲ್ಲಿ ನಾನಾ ತರದ
ಗೊಂಬೆಗಳು ಹೊರಟು, ರಾಜದಂಪತಿಗಳಿಗೆ ವಂದನೆ ಮಾಡುತ್ತ
ಮೇಲಕ್ಕೆ ಹಾರಿ ಹೋಗುತ್ತವೋ ಏನೋ ಎಂಬಂತೆ ಕಾಣುತ್ತಿದ್ದವು.
ಈ ಪ್ರಕಾರ ಆನಂದೋತ್ಸವಗಳಲ್ಲಿ ಬಾದಶಹರೂ ರಾಜ್ಞಿಯರೂ
ನಾಲ್ಕು ದಿವಸಗಳನ್ನು ಮುಂಬಯಿ ಪಟ್ಟಣದಲ್ಲಿ ಕಳೆದು, ತಾರೀಖು
೫ ನೇ ದಿಶಂಬರ ದಿವಸ ದಿಲ್ಲೀ ಪಟ್ಟಣಕ್ಕೆ ತೆರಳಿದರು.

---

೯ ದಿಲ್ಲಿ ಪಟ್ಟಣವು.

ದಿಲ್ಲೀಪಟ್ಟಣವು ಉತ್ತರ ಹಿಂದುಸ್ಥಾನದಲ್ಲಿ ಯಮುನಾನದಿಯ
ಪಶ್ಚಿಮ ದಂಡೆಯ ಮೇಲೆ ಇರುತ್ತದೆ. ಇದು ಬೇರೆ ಬೇರೆ ಕಾಲ
ಗಳಲ್ಲಿ ನಾನಾ ತರದ ಹೆಸರುಗಳಿಂದ ಉದಯಕ್ಕೆ ಬಂದಿರುತ್ತದೆ.

ಪಾಂಡವ-ಕೌರವರ ಕಾಲದಲ್ಲಿ ಇದಕ್ಕೆ ಹಸ್ತಿನಾಪುರವೆಂಬ ಹೆಸರಿತ್ತು. ಮಹಾಭಾರತದ ಆದಿ ಪರ್ವದ ೨೧೯, ೨೨೪ ನೇ ಅಧ್ಯಾಯಗಳಲ್ಲಿ ಇದು ಇಂದ್ರಭುವನವೆಂಬ ಹೆಸರನ್ನು ಪಡೆದಿರುತ್ತದೆ. ಇಲ್ಲಿಯೇ ಯುಧಿಷ್ಠಿರ ಜನಮೇಜಯ ರಾಜರ ಪಟ್ಟಾಭಿಷೇಕ ಆಗಿರುತ್ತದೆ. ಮುಂದೆ ಕೆಲವು ಕಾಲದ ನಂತರ ಇದೇ ದಿಲ್ಲಿಯು ಹಿಂದೂ ಮುಸಲ್ಮಾನ ಬಾದಶಹರ ರಾಜಧಾನಿ ಯಾಗಿತ್ತು. ಅಂದರೆ ಹಳೇ ರಜಪೂತರ ಕಾಲಕ್ಕೆ ಇದಕ್ಕೆ ರಾಯ ಪಿಠೋರಾ, ಲಾಲಕೋಟ ಎಂಬ ಹೆಸರುಗಳಿದ್ದವು. ಇದೇ ದಿಲ್ಲಿಯಲ್ಲಿ ಪೃಥ್ವಿರಾಜನು ಪ್ರಸಿದ್ಧಿಗೆ ಬಂದನು. ಮುಸಲ್ಮಾನ ಬಾದಶಹರಲ್ಲಿ ಗುಲಾಮ, ಲೋದಿ ಮುಂತಾದ ಅನೇಕ ಅರಸರು ಈ ದಿಲ್ಲಿಯನ್ನು ರಾಜಧಾನಿ ಮಾಡಿ, ಶಹಜಾನಬಾದ, ಕಿಲ್ಲಾ ಅಲಾಯಿ, ಫೆರೋಜಾನಬಾದ, ಪುರಾನಾ ಕಿಲ್ಲಾ ಎಂಬ ಹೆಸರುಗಳನ್ನಿಟ್ಟು ಆಳಿದರು. ಪೂರ್ವದ ಎಲ್ಲ ಅರಸರಂತೆ ಆಂಗ್ಲ ಪ್ರಭುಗಳಾದರೂ ಇಲ್ಲಿಯೇ ತಮ್ಮ ದರಬಾರು ಗಳನ್ನು ಮಾಡಿದರು. ಅಂದರೆ ವ್ಹಿಕ್ಟೋರಿಯಾ ಮಹಾರಾಣಿಯವರು ೧೮೭೭ ನೇ ಇಸವಿಯಲ್ಲಿ ಹಾಗೂ ಅವರ ಪುತ್ರರಾದ ಏಳನೇ ಎಡ್ವರ್ಡ ಬಾದಶಹರು ಸನ್ನ ೧೯೦೩ ನೇ ಇಸವಿಯಲ್ಲಿ ಕ್ರಮವಾಗಿ ತಮ್ಮ ಪದವೀಧಾರಣಸಮಾರಂಭಗಳನ್ನೂ ದರಬಾರುಗಳನ್ನೂ ಮಾಡಿಸಿದರು. ತಮ್ಮ ಮುತ್ತಮ್ಮ ಹಾಗೂ ತಂದೆಗಳು ಹ್ಯಾಗೋ ಹಾಗೆ ಇದೇ ಪಟ್ಟಣದಲ್ಲಿ ತಾ|| ೧೨ ನೇ ದಿಶೆಂಬರ ಸನ್ನ ೧೯೧೧ ಇಸವಿಯ ದಿವಸ ನಮ್ಮ ಪಂಚಮ ಜಾರ್ಜ ಬಾದಶಹರವರು ಸ್ವತಃ ಬಂದು ದರಬಾರವನ್ನು ಅಂದಗೊಳಿಸಿದರು. ಇದೇ ಪ್ರಕಾರ ಅನೇಕ ಅರಸರ ರಾಜಧಾನಿ ಯಾಗುತ್ತ ಬಂದದ್ದರಿಂದ, ಇದರ ವೈಭವವೆ ಷ್ಟಿರುವದೆಂಬದನ್ನು ವಾಚಕರೇ ಊಹಿಸತಕ್ಕದ್ದು.

ಚಕ್ರವರ್ತಿಯವರೂ ಮಹಾರಾಜ್ಞಿಯವರೂ ತಾವು ಇಲ್ಲಿಗೆ ಬರುವ ಸದಿಚ್ಛೆಯನ್ನು ಬಂದು ವರುಷ ಮೊದಲೇ ಪ್ರಕಟಿದ್ದರಿಂದ, ಅವರ

ಹಲುವಾಗಿ ಬಳ್ಳೇ ವ್ಯವಸ್ಥೆ ಮಾಡಲ್ಪಟ್ಟಿತ್ತು. ಅವರಿಗೂ ದೇಶೀಯ ಅರಸರಿಗೂ ಬೇಕಾಗುವ ನಾನಾತರದ ವಸ್ತುಗಳ ಸಂಗ್ರಹವನ್ನು ಮೊದಲೇ ಮಾಡಿಟ್ಟಿದ್ದರು. ಅವರು ಬಂದಾಗ್ಗೆ ಅಸಂಖ್ಯ ಗಾಡಿಗಳು ಸ್ಟೇಶನದಲ್ಲಿ ಬಂದು ನಿಂತಿದ್ದವು. ಬಂದ ಜನರಿಗೆ ಏನೂ ತೊಂದರೆ ಯಾಗದಂತೆ ಈ ದರಬಾರದ ಮೊದಲೇ ಅಲ್ಲಿ ಅನೇಕ ಪ್ರಕಾರದ ಏರ್ಪಾಟುಗಳು ಮಾಡಲ್ಪಟ್ಟಿದ್ದವು. ಇದರಿಂದಂತೂ ಆ ಪಟ್ಟಣಕ್ಕೆ ಅಸಾಧಾರಣವಾದ ಶೋಭೆಯುಂಟಾಗಿತ್ತು. ಇಂತಪ್ಪ ಈ ದಿಲ್ಲಿಯನ್ನು ದರಬಾರದ ಕಾಲಕ್ಕೆ ನೋಡಿದವನೇ ಧನ್ಯನು! ಬಳ್ಳೇ ಧನ್ಯನು!!

೧೦. ದರಬಾರದ ಸ್ಥಳವೂ ಮಂಟಪವೂ.

ಈ ದರಬಾರದ ಸ್ಥಳಕ್ಕೆ "ಆಂಫಿಥೀಯೆಟರ್" ಎಂಬಹೆಸರನ್ನಿಟ್ಟಿದ್ದರು. ಇದನ್ನು ಕಟ್ಟಿಸಲಿಕ್ಕೆ ಲೆಫೆಸೆಂಟ ಗವ್ಹರ್ನರಾದ ಸರ್ ಜಾನ್ ಹ್ಯೂವೇಟಯೆಂಬವರನ್ನು ನೇಮಿಸಿದ್ದರು. ಅವರು ಬಹಳೇ ಜಾಗ್ರತೆಯಿಂದಲೂ ವಿಚಾರದಿಂದಲೂ ಯಾವತ್ತರಿಗೂ ಅಚ್ಚುಕಟ್ಟಾಗಿ ಕಾಣಿಸುವಂತೆ ಕುರುಕ್ಷೇತ್ರದ ಸ್ಥಳಕ್ಕೆ ಸಮೀಪವಾಗಿ, ಅರ್ಧ ಚಂದ್ರಾಕೃತಿಯ ಮಂಟಪವನ್ನು ತಯಾರು ಮಾಡಿಸಿ, ಅಲ್ಲಿ ಬಹು ಅಂದವಾದ ಖುರ್ಚಿಗಳನ್ನು ಆಯಾ ಜನರ ಯೋಗ್ಯತೆಗೆ ಸರಿಯಾಗಿ ಇಡಿಸಿದ್ದರು. ಮತ್ತೊಂದು ಅರ್ಧ ಚಂದ್ರಾಕೃತಿಯ ಮಂಟಪಕ್ಕೆ ತಗಡುಗಳನ್ನು ಹಾಕಿಸಿ, ಮಳೆ ಬಿಸಿಲು ಹತ್ತದಂತೆ ಮಾಡಿಸಿ, ಅದಕ್ಕೆ ಸುಂದರವಾದ ಬಣ್ಣಗಳನ್ನು ಹಚ್ಚಿಸಿ, ಚಿತ್ರವಿಚಿತ್ರವಾದ ಧ್ವಜ

ಪತಾಕೆಗಳಿಂದಲೂ ತರತರದ ಕಾಗದದ ಹೂಗಳಿಂದಲೂ ಚಿತ್ರಗಳಿಂದಲೂ ಅದನ್ನು ಶೃಂಗರಿಸಿ, ಮಾಂಡಲೀಕ ರಾಜರ ಸಲುವಾಗಿ ಇದನ್ನು ಸಿದ್ಧ ಮಾಡಿಸಿದ್ದರು. ಬೇರೊಂದು ಚಂದ್ರಾಕೃತಿಯ ಮಂಟಪದ ಎರಡೂ ಭಾಗಗಳಲ್ಲಿ ದೊಡ್ಡ ದೊಡ್ಡ ಹಿಂದೀ ಅಧಿಕಾರಿಗಳು ಕೂಡ್ರುವದಕ್ಕಾಗಿ ಬುರ್ಜಿಗಳನ್ನಿಡಿಸಿದ್ದರು. ಈ ಸ್ಥಳದಲ್ಲಿ ನಡುನಡುವೆ ನಿಲ್ಲಿಸಿದ ಕಂಬಗಳಿಗೆ ನಾನಾತರದ ಬಣ್ಣಗಳ ಅರಿವೆಗಳನ್ನು ಸುತ್ತಿ, ತಳಿರು ತೋರಣಗಳನ್ನು ಕಟ್ಟಿ ಶೋಭಾಯಮಾನವಾಗಿ ಕಾಣುವಂತೆ ಮಾಡಿದ್ದರು. ಈ ಸ್ಥಳವು ದಿಲ್ಲಿಯಿಂದ ಸುಮಾರು ೮ ಮೈಲುಗಳ ಮೇಲೆ ಇತ್ತು. ಅಲ್ಲಿಗೆ ಹೋಗಲಿಕ್ಕೆ “ ದರಬಾರ ಲಾಯಿಟ ರೇಲ್ವೆ ” ಎಂಬ ಹೆಸರಿನದೊಂದು ಉಗಿ ಬಂಡಿಯ ಮಾರ್ಗವನ್ನು ಮಾಡಿದ್ದರು. ಆ ಗಾಡಿಯಲ್ಲಿ ಲೋಅರ್ ಕ್ಲಾಸ, ಅಪ್ಪರ್ ಕ್ಲಾಸ ಎಂಬ ಎರಡು ವರ್ಗಗಳನ್ನು ಮಾಡಿ, ಒಂದಕ್ಕೆ ನಾಲ್ಕು ಆಣೆಯು, ಮತ್ತೊಂದಕ್ಕೆ ಒಂದು ರೂಪಾಯದ ತಿಕೀಟುಗಳನ್ನಿಟ್ಟಿದ್ದರು. ಈ ದಾರಿಯಲ್ಲಿ ನಾಲ್ಕೈದು ಸ್ಟೇಶನ್‌ಗಳನ್ನು ಮಾಡಿದ್ದರು. ಗಾಡಿಗಳು ಹಗಲೂ ಇರುಳೂ ಎಡೆಬಿಡದೆ ಹೋಗಿಬರುತ್ತಿದ್ದವು. ಈ ಮಾರ್ಗದ ಎರಡೂ ಬದಿಗಳಲ್ಲಿ ದಂಡಿನ ಪಾಳ್ಯಗಳೂ ತೋಫಖಾನೆಗಳೂ, ಹಿಂದುಸ್ಥಾನದೊಳಗಿನ ದೊಡ್ಡ ದೊಡ್ಡ ಅರಸರ ಕ್ಯಾಂಪುಗಳೂ, ಬಾದಶಹರವರ ಶಿಪಾಯರ ತಂಬು ರಾಹುಟಿಗಳೂ ಇದ್ದವು. ಅವುಗಳ ಸುತ್ತುಮುತ್ತಲು ನಾನಾತರದ ಗಿಡಬಳ್ಳಿಗಳನ್ನು ಹಚ್ಚಿ ಉಪವನಗಳ ಸ್ವರೂಪವನ್ನು ತಂದಿದ್ದರು. ಇದಲ್ಲದೆ ಅಲ್ಲಲ್ಲಿಗೆ ಕಾರಂಜಿಗಳ ವ್ಯವಸ್ಥೆ ಮಾಡಿದ್ದರು. ಎಲ್ಲ ದೇಶೀಯ ಅರಸರು ತಮ್ಮ ತಮ್ಮ ಕ್ಯಾಂಪುಗಳಿಗೆ ಹೋಗುವದರಸಲುವಾಗಿ ಅಗಲವಾದ ಮಾರ್ಗಗಳನ್ನು ಮಾಡಿಸಿ, ನಡುನಡುವೆ ಕಮಾನುಗಳನ್ನು ಕಟ್ಟಿಸಿ, ಅವುಗಳನ್ನು ನಾನಾತರದ ಹೂವುಗಳಿಂದಲೂ ಅಲಂಕಾರಿಕ ವಸ್ತ್ರಗಳಿಂದಲೂ ಶೋಭಾಯಮಾನವಾಗಿ ಮಾಡಿ, ಅವುಗಳ ಶಿಖ

ರಗಳಮೇಲೆ ದೊಡ್ಡ ದೊಡ್ಡ ನಗಾರಖಾನೆಗಳನ್ನು ಮಾಡಿ, ಆ ನಗಾರ ಖಾನೆಗಳ ಶಿಖರಗಳ ಮೇಲೆ ರಾಜಭಕ್ತಿಯನ್ನು ವ್ಯಕ್ತ ಗೊಳಿಸುವ ದಕ್ಕಾಗಿ ಬಾದಶಹರವರ ಹಾಗು ಮಹಾರಾಜ್ಞಿಯವರ ಫೋಟೋ ಗಳನ್ನು ಇಡಿಸಿದ್ದರು. ಈ ಎಲ್ಲ ಕಮಾನುಗಳೂ ತಂಬುಗಳೂ ಧ್ವಜಪತಾಕೆಗಳಿಂದ ಅಲಂಕೃತವಾಗಿದ್ದವು. ಅಲ್ಲಲ್ಲಿಗೆ ಪ್ರತಿ ಸೂರ್ಯನಂತೆ ಕಾಣುವ ವಿದ್ಯುಚ್ಛಕ್ತಿಯಿಂದ ಮಾಡಲ್ಪಟ್ಟ ದೀವಿಗೆ ಗಳು, ಪ್ರಜ್ವಲಿತ ಪ್ರಕಾಶದಿಂದ ಉರಿಯುತ್ತಿದ್ದವು. ಈ ದೀಪಗಳಿಗೆ ಯಂತ್ರಗಳ ಸಹಾಯದಿಂದ ನಾನಾತರದ ಬಣ್ಣಗಳ ಪ್ರಕಾಶವುಂಟಾ ಗುವಂತೆ ಮಾಡಿದ್ದರು. ಇದು ಒಂದು ದೊಡ್ಡ ಪಟ್ಟಣದಂತೆ ಕಂಗೊಳಿಸುತ್ತಿತ್ತು. ಇಂದ್ರನಗರದಂತೆ ಶೋಭಿಸುವ ಈ ಅರಿವೇ ಪಟ್ಟಣದ ವ್ಯಾಸವು ಸುಮಾರು ನಾಲ್ಕು ಮೈಲು ಇತ್ತು. ಈ ಹೊಸ ಪಟ್ಟಣದ ನಡುವೆ ಪವಿತ್ರವಾದ ಯಮುನಾನದಿಯ ಎರಡು ಕಾಲಿವೆ ಗಳು ಹಾಯ್ದಿರುತ್ತವೆ. ಅವುಗಳಿಂದ ಸಣ್ಣ ಸಣ್ಣ ಕಾಲಿವೆಗಳನ್ನು ತೆಗೆದು ಪ್ರತಿಯೊಂದು ಸ್ಥಳದಲ್ಲಿ ನೀರು ಸುಲಭವಾಗಿ ಸಿಗುವಂತೆ ವ್ಯವಸ್ಥೆಯನ್ನು ಮಾಡಿದ್ದರು. ರಥಗಳಿಗೂ ಕುದುರೇಸ್ವಾರರಿಗೂ ಹಾಯಲಿಕ್ಕೆ ಸುಲಭವಾಗಬೇಕೆಂದು ಮಾರ್ಗಗಳನ್ನು ಅಗಲಾಗಿ ಮಾಡಿದ್ದರು; ಇದಲ್ಲದೆ ಗಾಳಿಯಿಂದ ಈ ಮಾರ್ಗಗಳಲ್ಲಿ ಧೂಳವು ಬಾರದಂತೆ ಎಣ್ಣೆಯನ್ನು ಹಾಕಿ ಆ ಮಾರ್ಗಗಳನ್ನು ತಯಾರ ಮಾಡಿದ್ದರು. ಸಂಜೆಯಲ್ಲಿ ಈ ಕ್ಯಾಂಪುಗಳಕಡೆಗೆ ತಿರುಗಾಡಲಿಕ್ಕೆ ಹೋಗಲಾಗಿ, ಮನೋಹರವಾಗಿ ಹಾರುತ್ತಿರುವಂಥ ಕಾರಂಜಿ ಗಳಿಂದಲೂ ಮಂದಮಾರುತನಗೂಡ ಆಲ್ಲಾಡುತ್ತಿರುವಂಥ ಗಿಡಬಳ್ಳಿ ಗಳಿಂದಲೂ ಆ ಕ್ಷೇತ್ರವೆಲ್ಲ ನಂದನವನದಂತೆ ಒಪ್ಪುತ್ತಿತ್ತು.

ಮುಂಬಯಿ ಇಲಾಖೆಯಲ್ಲಿ ಇರುವ ಅರಸರೆಲ್ಲರು ಕೂಡಿ ಒಂದು ಕಮಾನವನ್ನು ಎಷ್ಟೋ ಸಾವಿರ ರುಪಾಯಿಗಳನ್ನು ವೆಚ ಮಾಡಿ, ಗಚ್ಚು

ಕಲ್ಲಿನಿಂದ ಕಟ್ಟಿಸಿದ್ದರು. ಕಾಶ್ಮೀರ ಅರಸರು ಹಾಗು ರಾಮಪುರದ ನವಾಬ ಕಟ್ಟಿಸಿದ ಕಮಾನುಗಳಂತೂ ವರ್ಣಿಸಕೂಡದಷ್ಟು ಸುಂದರ ವಾಗಿದ್ದವು. ಇದೇ ಮೇರೆಗೆ ಸಿಂದ್ಯೆ, ಹೋಳಕರ, ಗಾಯಕವಾಡ, ಮೈಸೂರಮಹಾರಾಜರು, ನಿಜಾಮ ಮುಂತಾದ ಅರಸರು ಕಟ್ಟಿಸಿದ ಕ್ಯಾಂಪುಗಳಂತೂ ಅವರ್ಣನೀಯವಾಗಿದ್ದವು. ಬುಂದೇಲಖಂಡದ ಲ್ಲಿಯ ಚರಕೇರಿಯ ಅರಸರು ೫೦ ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿ, ಒಂದು ಭವ್ಯವಾದ ಮಂಟಪವನ್ನು ಕಟ್ಟಿಸಿ, ಅದರಮಧ್ಯಭಾಗ ದಲ್ಲಿ ಬೆಳ್ಳಿ, ಭಂಗಾರಗಳಿಂದ ಮಾಡಿದ ಎರಡು ಸಿಂಹಾಸನಗಳನು ಇಟ್ಟು, ಅವುಗಳ ಮೇಲೆ ಬಾದಶಹ ಮತ್ತು ರಾಜ್ಞಿಯವರ ಚಿತ್ರಗಳ ನ್ನಿರಿಸಿ ತಮ್ಮ ರಾಜಭಕ್ತಿಯನ್ನು ಪ್ರಕಟಮಾಡಿದ್ದರು. ಈ ಮಹಾರಾಜ ರವರು ಒಂದು ಬೆಳ್ಳಿಯ ರಥವನ್ನು ಮಾಡಿಸಿ, ಅದರ ಹೊರಮಗ್ಗುಲ ವನ್ನೆಲ್ಲ ಬಂಗಾರದ ಹೂವುಗಳಿಂದ ಶೃಂಗರಿಸಿ, ಈ ಮಹಾ ದಿವ್ಯ ವಾದ ಮಂಟಪದ ಹೊರಬದಿಯಲ್ಲಿರಿಸಿದ್ದರು; ಪ್ರೇಕ್ಷಕರು ಅದನ್ನು ನೋಡಿ ಅತಿ ಸೋಜಿಗಗೊಳ್ಳುತ್ತಿದ್ದರು.

---

೧೧. ಬಾದಶಹಾ ಮತ್ತು ರಾಜ್ಞಿಯವರ ಸಿಂಹಾಸನಗಳು

ಹಿಂದೆ ವರ್ಣಿಸಿದ ‘ ಅಂಫಿಥಿಯೆಟರ ’ ಎಂಬ ಮಹಾ ರಮಣೀ ಯವಾದ ಮಂಟಪದಲಿ, ಈ ಪ್ರಭುಗಳ ಸಿಂಹಾಸನಗಳನ್ನು ಇಟ್ಟಿ ದ್ದರು. ಇವನ್ನು ನೆಲದಿಂದ ಸ್ವಲ್ಪ ಎತ್ತರದ ಮೇಲೆ ಕಟ್ಟಿಸಿ ಅವಕ್ಕೆ

ಶುಭ್ರವಾದ ಬಣ್ಣವನ್ನು ಹಚ್ಚಿದ್ದರು. ಈ ಮಂಟಪದ ನಡುನಡುವೆ ಭಂಗಾರದಂತೆ ಹೊಳೆಯುತ್ತಿರುವ ಕಂಬಗಳನ್ನು ನಿಲ್ಲಿಸಿ, ಅವುಗಳ ಮೇಲೆ ಚಿತ್ರವಿಚಿತ್ರವಾದ ನಕ್ಷೆಗಳನ್ನು ತೆಗೆದಿದ್ದರು. ಈ ಕಂಬಗಳ ಮೇಲ್ಬದಿಗೆ ಬಂಗಾರದ ವರ್ಣದಿಂದ ಶೋಭಾಯಮಾನವಾದ ಸಣ್ಣ ಸಣ್ಣ ಕಳಸಗಳನ್ನಿಟ್ಟಿದ್ದರು.

ಈ ಮಂಟಪದ ಮಧ್ಯಭಾಗದ ಉಚ್ಚಸ್ಥಾನದಲಿ ಒಂದು ದೊಡ್ಡ ಕಲಶವನ್ನಿಟ್ಟಿದ್ದರು. ಈ ಮಂಟಪದ ಎದುರಿಗೆ ಒಂದು ಸಣ್ಣ ಮಂಟಪವಿದ್ದು ಅದರಲ್ಲಿ ಒಂದು ಸಣ್ಣ ಸಿಂಹಾಸನವಿತ್ತು. ಮುಖ್ಯ ಸಿಂಹಾಸನದ ನಾಲ್ಕೂ ಬದಿಗೆ ಮಖಮಲಿನ ಚಂದ್ರಾಕೃತಿಯ ಪರದೆಗಳು ಜೋಲು ಬಿದ್ದಿದ್ದವು. ಈ ಪರದೆಗಳ ಮೇಲೆ ಜರದ ಅಪೂರ್ವ ನಕ್ಷೆಗಳನ್ನು ತೆಗೆದಿದ್ದರು. ಇವುಗಳ ಸುತ್ತುಮುತ್ತಲು ಸುಮಾರು ಮೂವತ್ತುನಾಲ್ವತ್ತು ಖುರ್ಚಿಗಳನ್ನಿಟ್ಟಿದ್ದರು. ಉಚ್ಚಸ್ಥಾನದಲ್ಲಿ ಮಹಾರಾಜರ ಮತ್ತು ರಾಜ್ಞಿಯರ ಸಲುವಾಗಿ ಎರಡು ಸಿಂಹಾಸನಗಳನ್ನಿರಿಸಿದ್ದರು.

—— —

೧೨. ದಿಲ್ಲೀ ಪಟ್ಟಣದಲ್ಲಿ ಸಾರ್ವಭೌಮ ಅರಸರ ಗಮನವು.

ಪ್ರಿಯ ಪತ್ನಿಯವರನ್ನೊಡಗೂಡಿದಂಥ ಪರಿವಾರಸಮೇತರಾಗಿರುವಂಥ ರಾಜಾಧಿರಾಜರ ಮೆರವಣಿಗೆಯು ತಾರೀಖು ೭ ದಿಶೆಂಬರ ೧೯೧೧ ಇಸವಿಯ ದಿವಸ ಬಹಳ ವೈಭವದಿಂದ ಹೊರಟಿತು. ಅದರಿಂದ ಅಲ್ಲಲ್ಲಿಗೆ ದೀಪೋತ್ಸವಗಳೂ, ಸ್ವಾಗತ ಸಮಾರಂಭಗಳೂ ಸಾಗಿದವು. ಎತ್ತ ನೋಡಿದತ್ತೆಲ್ಲ ಜನಸಮೂಹಗಳೇ ಕಾಣುತ್ತಿದ್ದವು. ದರಬಾರಕ್ಕೆ ಬರುವ ಯಾವತ್ತು ಏತದ್ದೇಶೀಯ ಅರಸರು ಬಂದು,

ದರ್ಶನವನ್ನು ತೆಗೆದುಕೊಂಡರು. ಪರಸ್ಪರರಲ್ಲಿ ಆನಂದದಿಂದ ಕೂಡಿದ ಪ್ರೀತಿಯ ಸಂಭಾಷಣೆಗಳು ಸಾಗಿದವು. ತಾರೀಖು ೧೨ನೇ ದಿಶೆಂಬರದ ದಿವಸ ಎತ್ತನೋಡಿದತ್ತ ಬೆಲೆಯುಳ್ಳ ಬಂಡಿಗಳೂ, ಮನೋಹರವಾದ ಮೋಟಾರಗಳೂ ಚುರುಕಾದ ಕುದುರೆಗಳ ರಥಗಳೂ ಕಾಣಿಸುತ್ತಿದ್ದವು.

ಇಡೀ ಪಟ್ಟಣವೆಲ್ಲ ಜನಸಮೂಹಗಳಿಂದ ತುಂಬಿ ತುಳುಕುತ್ತಿತ್ತು. ಮುಂಜಾನೆ ಎಂಟು ಗಂಟೆಯಿಂದ ದರಬಾರದ ಸ್ಥಳಕ್ಕೆ ಎಷ್ಟೋ ಅರಸರೂ, ಅರಸಿಯರೂ, ಸರದಾರರೂ, ನಾಯಕರೂ, ದಳವಾಯಿಗಳೂ ನಾನಾ ತರದ ವಸ್ತ್ರಾಲಂಕಾರಗಳಿಂದ ಶೋಭಿತರಾಗಿ, ಯೋಗ್ಯತಾನುಸಾರವಾಗಿ ರಥಗಳಲ್ಲಿಯೂ, ಕುದುರೆಗಳ ಮೇಲೆಯೂ, ಬಂಡಿಗಳಲ್ಲಿಯೂ ಕುಳಿತುಕೊಂಡು ಹೋಗುತ್ತಿದ್ದರು. ಅಲ್ಲಿಗೆ ಹೋಗಲಿಕ್ಕೆ ತಿಕೀಟುಗಳ ಸಲುವಾಗಿಯೂ, ಗಾಡಿಗಳ ಸಲುವಾಗಿಯೂ ಜನರ ಗೊಂದಲವು ಒಂದೇಸವನೇ ನಡದೇ ಇತ್ತು. ಈ ಅನಾನುಕೂಲತೆಯ ಮೂಲಕ ಎಷ್ಟೋ ಜನರು ಕಾಲು ದಾರಿಯಿಂದ, ಎಷ್ಟೋ ಜನರು ಕುದುರೆಗಳ ಮೇಲೆ ದರಬರದ ಸ್ಥಳಕ್ಕೆ ಹೋದರು. ಈ ದರಬಾರದ ನಿಮಿತ್ಯವಾಗಿ ಪರಸ್ಥಳದಿಂದ ಅಸಂಖ್ಯ ಟಾಂಗೆಗಳೂ, ರಥಗಳೂ, ಬಂಡಿಗಳೂ ಬಂದಿದ್ದವು. ಅವುಗಳ ಮೇಲೆ ನಂಬರುಗಳನ್ನು ಹಾಕಿ ಇಂಥಿಂಥಾ ಸ್ಥಳಗಳಲ್ಲಿ ಇಷ್ಟೇ ಬಾಡಿಗೆಯನ್ನು ತೆಗೆದುಕೊಳ್ಳಬೇಕೆಂದು ಗೊತ್ತು ಮಾಡಿದ್ದರು. ದರಬಾರದ ಎದುರಿಗೆ ಒಂದು ದೊಡ್ಡ ಮೈದಾನದ ಮೇಲೆ ನಿಂತರೆ ಬಾದಶಹಗಳ ಮತ್ತು ರಾಜ್ಞಿಯವರ ಸಿಂಹಾಸನಗಳು ಕಾಣುತ್ತಿದ್ದವು. ಅವುಗಳನ್ನು ನೋಡಿದ ಪ್ರತಿಒಬ್ಬ ಮನುಷ್ಯನಿಗೆ ಸಾನಂದಾಶ್ಚರ್ಯ ವಾಗದೆ ಇರಲಾರದು.

---

೧೩. ದರಬಾರದ ಸಮಾರಂಭವು.

ಈ ಮೇರೆಗೆ ತಮ್ಮ ಯೋಗ್ಯತಾನುಸಾರವಾಗಿ. ವೈಭವದಿಂದ ದೇಶೀಯ ಅರಸರೂ ಸರದಾರರೂ ಬಂದು ಸಭಾಮಂಟಪದಲಿ ಕುಳಿತ್ತಿದ್ದರು. ಸೇನೆಯ ಒಂದು ಭಾಗವು ಮೊದಲೇ ಬಂದು, ಸಿಂಹಾಸನದ ಮುಂಭಾಗದಲ್ಲಿ ಸ್ವಲ್ಪ ಅಂತರದಮೇಲೆ ನಿಂತಿತ್ತು. ಉಳಿದ ಎಲ್ಲ ಜನರು ಬಂದು ಕೂತಮೇಲೆ ಹಿಂದುಸ್ಥಾನದ ಗವ್ಹರ್ನರಜನರಲ್‌ರಾದ ಲಾರ್ಡ ಹಾರ್ಡಿಂಜರವರು ಬಂದರು. ಸುಮಾರು ೧೨ ಘಂಟೆಗೆ ಹಿಂದುಸ್ಥಾನದ ಸಾರ್ವಭೌಮ ರಾಜದಂಪತಿಗಳು ರತ್ನಖಚಿತವಾದ ಕಿರೀಟಗಳನ್ನು ಧರಿಸಿಕೊಂಡು, ಅಂಗರಕ್ಷಕ ಸೇನಾಸಮೇತರಾಗಿ ನಾಲ್ಕು ಕುದುರೆಯ ರಥದೊಳಗೆ ಕುಳಿತು ಸಭಾಮಂಟಪಕ್ಕೆ ಬಂದು ತಲಪಿದರು. ಆ ಕಾಲಕ್ಕೆ ಎಲ್ಲ ಜನರು ಒಂದು ಮಾಟದ ಗೊಂಬಿಯಂತೆ ಆನಂದದಿಂದಕೂಡಿದ ತಟಸ್ಥ ವೃತ್ತಿಯನ್ನು ಧರಿಸಿದ್ದರು. ಬಾದಶಹರ ಮತ್ತು ರಾಜ್ಞಿಯವರ ಉದ್ದವಾದ ಝುಗೆಗಳನ್ನು ಜೋಧಪುರ ಜಯಪುರದ ರಜಪುತ ರಾಜಕುಮಾರರು ಎತ್ತಿ ಹಿಡಿದಿದ್ದರು. ಯಾವತ್ತು ಜನಸಮೂಹವು ಚಪ್ಪಾಳೆಯಿಂದ ಆನಂದೋತ್ಸವವನ್ನು ಪ್ರಕಟಿಸಿತು. ಬ್ಯಾಂಡುಗಳೂ, ತೋಫುಗಳೂ. ರಾಷ್ಟ್ರೀಯ ಸಂಗೀತ ಗಾನಗಳೂ ಮಧುರವಾದ ವಾದ್ಯಗಳೂ ಏಕಕಾಲಕ್ಕೆ ಜಯಘೋಷವನ್ನು ಆರಂಭಮಾಡಿ, ಸಿಂಹಾಸನಾರೂಢ ಆದರು, ಮುಂದೆ ಅರ್ಧ ತಾಸಿನ ವರೆಗೆ ಹಾಗೆಯೇ ಸಾಗಿದವು. ಅಲ್ಲಿಂದ ಸೈನಿಕರು ರಾಜನಿಷ್ಟೆಯಿಂದ ಮುಜರೆಗಳನ್ನು ಮಾಡಿದರು. ಇಷ್ಟಾದಬಳಿಕ, ದರಬಾರಕ್ಕೆ ಆರಂಭವಾಯಿತು. ಹಿಂದುಸ್ಥಾನದ ಮುಖ್ಯ ಸೆಕ್ರೆಟರಿಗಳಾದ ಕ್ರ್ಯೂಧೊರೆಗಳವರು ವಿನಯಪೂರ್ವಕವಾಗಿ ಬಿನ್ನವಿಸಿಕೊಂಡಮೇರೆಗೆ ಬಾದಶಹರು ಎದ್ದು ನಿಂತು, ತಮ್ಮ ಭಾಷಣವನ್ನು ಸ್ಪಷ್ಟವಾಗಿ ಎಲ್ಲರಿಗೂ ಕೇಳ ಬರುವಂತೆ ಘಟ್ಟಿಯಾಗಿ ಓದಿ ತೋರಿಸಿದರು. ಆಕಾಲಕ್ಕೆ

ಜನಸಮೂಹವು ಮಹಾಸಾಗರದಂತೆ ವಿಸ್ತಾರವಾಗಿದರೂ ಏಕ ಚಿತ್ತದಿಂದ ತಲ್ಲೀನವಾಗಿ ಸಮಾಧಾನವೃತ್ತಿಯಿಂದ ಭಾಷಣವನ್ನು ಆಲೈಸಿತು. ಆ ಭಾಷಣದ ಸಾರಾಂಶವೇನಂದರೆ:—

"ಸಮಾಧಾನವೃತ್ತಿಯಿಂದಲೂ ಕೃತಜ್ಞತೆಯಿಂದಲೂ ಉಲ್ಲಾಸ ದಿಂದಲೂ ನಾನು ನಿಮ್ಮೆಲ್ಲರ ಎದುರಿಗೆ ಎದ್ದುನಿಂತಿರುತ್ತೇನೆ. ಈ ವರುಷವು ಮಹಾರಾಜ್ಞಿಯವರಿಗೂ ನಮಗೂ ಒಳ್ಳೇ ಸಮಾರಂಭ ಗಳಲ್ಲಿಯೂ ಸಂತೋಷಾನಂದಗಳಲ್ಲಿಯೂ ಕಳೆದು ಹೋಯಿತು. ಹಿಂದುಸ್ಥಾನಕ್ಕೆ ನಾವು ಈ ಮೊದಲು ಮಾಡಿದ ಆಗಮನವು, ಸ್ಥಲಾಂ ತರದಕಡೆಗೂ ಕಾಲಾಂತರದಕಡೆಗೂ ಲಕ್ಷಗೊಡದೆ ಕೃತಜ್ಞತೆಯು ಕ್ತವಾದ ಅತ್ಯಂತ ಪ್ರೀತಿಗೆ ಪಾತ್ರವಾದ ಈ ಭರತಭೂಮಿಯಕಡೆಗೆ ನಮ್ಮನ್ನು ಆಕರ್ಷಣ ಮಾಡಿಕೊಂಡು ಪುನಃ ತಂದಿರುತ್ತದೆ. ಯಾವ ಈ ದೇಶದಲ್ಲಿ ಅತ್ಯಂತ ಪ್ರೇಮದಿಂದ ಹಿಂದಕ್ಕೆ ನಮಗೆ ಸ್ವಾಗತ ವಾಗಿತ್ತೋ ಅಂಥಾ ದೇಶದ ದರ್ಶನವನ್ನು ಮತ್ತೊಮ್ಮೆ ತೆಗೆದು ಕೊಳ್ಳುವ ವಿಶೇಷ ಅಭಿಲಾಷೆಯಿಂದಲೂ ಲವಲವಿಕೆಯಿಂದಲೂ ಅಂತಃಕರಣದಿಂದಲೂ ನಾವು ಈ ಮಹತ್ಪ್ರಯಾಣವನ್ನು ಕೈಕೊಂ ಡೆವು. ಹೋದ ಜುಲೈ ತಿಂಗಳ ೨೨ ನೇ ತಾರೀಖಿಗೆ ವೆಸ್ಟ ಮಿನಿಸ್ಟರ ಅಬೆಯಲ್ಲಿ ಆದ ರಾಜ್ಯಾರೋಹಣವನ್ನು ನಿಮಗೆ ನಾವು ಸ್ವತಃ ತಿಳಿಸುವ ಇಚ್ಛೆಯನ್ನು ಅದೇ ಜುಲಾಯಿ ತಿಂಗಳಲ್ಲಿ ಅದೇ ರಾಜ್ಯಾರೋಹಣಕಾಲದಲ್ಲಿ ವ್ಯಕ್ತಪಡಿಸಿರುತ್ತೇವೆ. ಅದನ್ನು ನಾವು ಈಹೊತ್ತು ಪೂರ್ಣ ಮಾಡಿದ್ಧೇವೆ. ಹಿಂದುಸ್ಥಾನದೊಳಗಿನ ರಾಜ ನಿಷ್ಠೆಯುಳ್ಳ ಅರಸರ ಮೇಲೆಯೂ ಸ್ವಾಮಿ ಭಕ್ತಿಯುಳ್ಳ ಪ್ರಜೆಗಳ ಮೇಲೆಯೂ ನಮ್ಮ ಪ್ರೀತಿ ಎಷ್ಟುಅದೆ, ಎಂಬದನ್ನೂ, ಹಿಂದೀ ಸಾಮ್ರಾಜ್ಯದ ಕಲ್ಯಾಣ ಸುಖಗಳ ಬಗ್ಗೆ ನಮ್ಮ ಅಂತಃಕರಣವು ಎಷ್ಟು ಆತುರವುಳ್ಳದ್ದಿರುತ್ತದೆಂಬದನ್ನೂ ತೋರಿಸಲಿಕ್ಕೂ ಹಾಗೂ ಇಂಗ್ಲಂಡದಲ್ಲಿ ರಾಜ್ಯಾರೋಹಣದಕಾಲಕ್ಕೆ ಯಾವ ಜನರಿಗೆ

ಬರುವದಕ್ಕೆಅನಾನುಕೂಲತೆ ಇಶ್ಟೋ ಅಂಥವರಿಗೆ ಇಲ್ಲಾದರೂ ಬರುವದಕ್ಕೆಅನುಕೂಲತೆ ಆಗಬೇಕೆಂತಲೂ, ನಮ್ಮ ನಂಬಿಗೆ ಯುಳ್ಳ ಗವ್ಹರ್ನರರು ಮತ್ತು ದೊಡ್ಡ ದೊಡ್ಡ ಪದವಿಗಳುಳ್ಳ ನಮ್ಮ ಮಾಂಡಲಿಕ ಸಂಸ್ಥಾನಿಕರು, ಪ್ರತಿನಿಧಿಗಳು ನಮ್ಮ ಹಿಂದೀ ಸಾಮ್ರಾಜ್ಯದಲ್ಲಿದ್ದ ಸೈನ್ಯದ ಪ್ರತಿನಿಧಿಯು ಮುಂತಾದ ಪ್ರಚಂಡ ಜನಸಮೂಹದ ಅವಲೋಕನಾರ್ಥವಾಗಿ ಮಹಾರಾಜ್ಞಿ ಸಮೇತ ರಾಗಿ ನಾವು ಇಲ್ಲಿಗೆ ಬಂದಿರುತ್ತೇವೆ. ಇವರೆಲ್ಲರೂ ತೋರಿಸಿದ ಸ್ವಾಮಿಭಕಿಯನ್ನೂ ರಾಜನಿಷ್ಠೆಯನ್ನೂ ಸ್ವೀಕಾರಮಾಡಲಿಕ್ಕೆ ನಮಗೆ ಅಂತಃಕರಣಪೂರ್ವಕವಾಗಿ ಆನಂದವಾಗುತ್ತದೆ. ಇತಿ ಹಾಸದೊಳಗಿನ ಮಹತ್ವದ ಪ್ರಸಂಗಗಳಲ್ಲಿ ಹಿಂದಿನ ಸಂಸ್ಥಾನಿಕ ರಿಗೂ ಪ್ರಜೆಗಳಿಗೂ ಮತ್ತು ನಮಗೂ ಇದ್ದ ನಿಕಟತರದ ಸ್ನೇಹದ ಬಂಧನವನ್ನು ನೋಡಿ, ನನ್ನ ಹೃದಯವು ಹರ್ಷದಿಂದ ತುಂಬಿ ತುಳುಕುತ್ತಲಿದೆ. ಈ ಮನೋವೃತ್ತಿಯನ್ನು ದೃಢಪಡಿಸಬೇಕೆಂತಲೂ ರಾಜ್ಯಾರೋಹಣವು ಚಿರಸ್ಮರಣೀಯವಾಗಬೇಕೆಂತಲೂ ಹಿಂದುಸ್ಥಾ ನಕ್ಕೆ ಕೆಲವು ದೇಣಗಿಗಳನ್ನು ಕೊಡಬೇಕೆಂತಲೂ ನಾವು ಇಲ್ಲಿಗೆ ಬಂದಿರುತ್ತೇವೆ. ಈ ದೇಣಗಿಗಳನ್ನು ನಮ್ಮ ಗವ್ಹರ್ನರ ಜನರಲ್‌ರು ದರಬಾರದಲ್ಲಿ ಪ್ರಕಟ ಮಾಡುವರು. ಕೊನೆಗೆ ನಿಮ್ಮ ಹಕ್ಕುಗಳನ್ನೂ ಹಿತ ಸಂಬಂಧಗಳನ್ನು ಸಂರಕ್ಷಣೆ ಮಾಡುವ ಕುರಿತು ನಮ್ಮ ಪೂಜ್ಯರಾದ ಪೂರ್ವಜರು ಕೊಟ್ಟ ಅಭಿವಚನಗಳನ್ನು ನಾವು ಪುನರುಜ್ಜೀವನ ಮಾಡುವದು ನಮಗೆ ಕಲ್ಯಾಣಕರವಾದದ್ದೂ ಶಾಂ ತತೆಯನ್ನುಂಟು ಮಾಡುವಂಥಾದ್ದೂ ಇರುತ್ತದೆಂಬದನ್ನು ಅರುಹುವ ದು ಇದೇ ಪ್ರಸಂಗವಿರುತ್ತದೆಂದು ತಿಳಿಸಲಿಕ್ಕೆ ನಮಗೆ ಅತ್ಯಾನಂದವಾ ಗುತ್ತದೆ. ನಮ್ಮ ಪ್ರಜೆಗಳಮೇಲೆ ಪರಮೇಶ್ವರನ ಕೃಪಾದೃಷ್ಟಿಯು ಚಿರಕಾಲವಿರಲಿ ಮತ್ತು ಅವರ ಸುಖದ ಸಮೃದ್ಧಿ, ಅಭಿವೃದ್ಧಿಗಳನ್ನು ಮಾಡಲಿಕ್ಕೆ ನಮಗೆ ಸಹಾಯ ಮಾಡಲಿ. ಇಲ್ಲಿದ್ದ ಮಾಂಡಲಿಕ ಸಂ ಸ್ಥಾನಿಕರ ಮತ್ತು ಪ್ರಜೆಗಳ ಸ್ವಾಗತವನ್ನು ನಾವು ಅಂತಃಕರಣಪೂ ರ್ವಕವಾಗಿ ಮಾಡುತ್ತೇವೆ."

ಈ ಮೇರೆಗೆ ಸುಶ್ರಾವ್ಯ ಭಾಷಣವನ್ನು ಮಾಡಿ, ಚಕ್ರವರ್ತಿ
ಗಳು ಸಿಂಹಾಸನದ ಮೇಲೆ ಕುಳಿತುಕೊಂಡರು. ಆ ಮೇಲೆ ಪ
ದ್ದೇಶೀಯ ಅರಸರೂ, ಗವ್ಹರ್ನರರೂ, ಸರದಾರರೂ, ರಾಜವಂದನೆ
ಯನ್ನು ಮಾಡಲಿಕ್ಕೆ ಆರಂಭ ಮಾಡಿದರು. ಮೊದಲು ಗವ್ಹರ್ನರ
ಜನರಲ್ ಲಾರ್ಡ ಹಾಂರ್ಡಿಂಜರವರು ಟೊಪ್ಪಿಗೆ ತೆಗೆದು ಬಾಗಿ
ವಿನಯದಿಂದ ಎರಡು ಸಾರೆ ವಂದನೆಯನ್ನು ಮಾಡಿದರು. ತರ
ವಾಯ ಹಿಂದುಸ್ಥಾನದ ಸೇನಾಪತಿಗಳಾದ ಸರ್ ಓಮರ ಕ್ರೇಗ್‌ರೂ
ಗವ್ಹರ್ನರರೂ ಆ ಮೇಲೆ ಸಭಾಸದರೂ ವಂದನೆಗಳನ್ನು ಮಾಡಿ
ದರು. ಬಳಿಕ ಹೈದರಾಬಾದ, ಬಡೋದೆ, ಮೈಸೂರ, ಕಾಶ್ಮೀರ
ರಜಪುತಸ್ಥಾನದೊಳಗಿನ ಸಂಸ್ಥಾನಿಕರು, ಬಲುಚಿಸ್ಥಾನ, ಸಿಕೀಮ
ಭೂತಾನ ಮುಂತಾದ ಪ್ರದೇಶಗಳ ರಾಜರೂ, ಕಲಕತ್ತೆಯ ಹಾಯ
ಕೋರ್ಟ ಜಜ್ಜರೂ, ಗವ್ಹರ್ನರ ಜನರಲ್ಲರ ಕೌನ್ಸಿಲರರೂ, ಮದ್ರಾಸ
ಗವ್ಹರ್ನರ ಮತ್ತು ಅವರ ಸಭಾಸದರರೂ, ಮುಂಬಯಿ ಗವ್ಹರ್ನರ
ಮತ್ತು ಅವರ ಸಭಾಸದರರೂ, ಬಂಗಾಲ, ಸಂಯುಕ್ತಪ್ರಾಂತ, ಪ
ಜಾಬ, ಬ್ರಹ್ಮದೇಶ, ಪೂರ್ವಬಂಗಾಲ, ಆಸಾಮು, ಮಧ್ಯಪ್ರಾಂತ
ಮುಂತಾದ ಪ್ರಾಂತಗಳ ಮುಖ್ಯಾಧಿಕಾರಿಗಳೂ ಕ್ರಮದಿಂದ ತಮ್ಮ
ತಮ್ಮ ವಂದನೆ ಪ್ರಣಾಮಗಳನ್ನು ಮಾಡುವ ಕಾರ್ಯವನ್ನು ತೀ
ಸಿದರು. ಯಾವತ್ತು ಅರಸರು ತಮ್ಮ ತಮ್ಮ ದೇಶದ ಪದ್ಧತಿಯ
ಮೇರೆಗೆ ಪ್ರಣಾಮಗಳನ್ನು ಮಾಡುತ್ತಿದ್ದರು. ಇದನ್ನು ನೋಡಿ
ಎಲ್ಲರಿಗೂ ಆನಂದಾಶ್ಚರ್ಯಗಳಾದವು. ಮಹಾರಾಷ್ಟ್ರ ಸಂಸ್ಥಾನಿ
ರಲ್ಲಿ ಕೋಲ್ಹಾಪುರ, ದೇವಾಸ, ಮುಧೋಳ ಮುಂತಾದ ಪ್ರಾಂ
ಗಳ ಅರಸರು ತಮ್ಮ ತಮ್ಮ ಖಡ್ಗಗಳನ್ನು ಸಿಂಹಾಸನದ ಅಡಿಯಲ್ಲಿ
ಟ್ಟು, ಬಹು ನಮ್ರತೆಯಿಂದಲೂ ವಿನಯದಿಂದಲೂ ಎರಗಿ ನೆಲಕ್ಕೆ
ಕೈ ಹಚಿ ವಂದನೆಯನ್ನು ಮಾಡಿದರು. ಆಗ್ಗೆ ಮಹಾರಾಣಿಯವರ
ಮುಗುಳುನಗೆಯಿಂದಲೂ ನೇತ್ರಕಟಾಕ್ಷದಿಂದಲೂ ಎಲ್ಲರಿಗೂ ಅಭಿ
ನಂದನ ಮಾಡಿದಂತೆ ತೋರಿಸಿದರು. ಭಾವಲಪುರದ ಅಲ್ಪವಯ

ನ ನವಾಬಸಾಹೇಬರ ಚಟವಟಿಯನ್ನೂ ಧೈರ್ಯವನ್ನೂ ಗಾಂಭೀ ರ್ಯವನ್ನೂ ನೋಡಿ, ಎಲ್ಲರಿಗೂ ಬಹು ಸೋಜಿಗವಾಗಿ ಕೈ ಚಪ್ಪಳೆ ಯನ್ನು ಬಾರಿಸಿದರು. ಇದನ್ನೆಲ್ಲ ಕಂಡು ಅರಸರೊಡನೆ ಬಂದಿದ್ದ ಇಂಗ್ಲಂಡದ ಜನರಿಗೆ ತಮ್ಮ ರಾಜರ ವೈಭವನ್ನು ನೋಡಿ ಪರಮಾ ನಂದವಾಯಿತು.

ಈ ಪ್ರಕಾರ ವಂದನೆ ಮಾಡುವ ಸಮಾರಂಭವು ಮುಗಿದ ಬಳಿಕ, ಚಕ್ರವರ್ತಿಯವರು ತಮ್ಮ ಅರ್ಧಾಂಗಿಯವರನ್ನೊಡಗೊಂಡು ಹಿಂ ಭಾಗಕ್ಕಿದ್ದ ಮತ್ತೊಂದು ಆರಾಮ ಮಂಟಪಕ್ಕೆ ಲಾರ್ಡ ಹಾ ರ್ಡಿಂಜ ಮತ್ತು ಲಾರ್ಡ ಕ್ರ್ಯೂರವರ ಪರಿವಾರದೊಡನೆ ಹೋಗಿ, ತಮ್ಮ ತಮ್ಮ ಸಿಂಹಾಸನಗಳ ಮೇಲೆ ಕುಳಿತರು. ಆವೆರಡೂ ಸಿಂಹಾ ಸನಗಳ ನಡುವೆ ಸುಮಾರು ಇಪ್ಪತ್ತೈದು ಮೊಳಗಳ ಅಂತರ ವಿದ್ದು ರೂ ರಾಜದಂಡ ಛತ್ರಚಾಮರಗಳು ಮುಂತಾದ ರಾಜಚಿಹ್ನಸಮೇತ ಹೋದರು; ಅವರ ಮುಂದೆ ರಾಜದೂತರು ಖಡ್ಗಗಳನ್ನು ತಮ್ಮ ಮೋರೆಯ ಮುಂದೆ ಹಿಡಿದು ಕೊಂಡು ರಾಜದಂಪತಿಗಳ ಕಡೆಗೆ ಮೋರೆ ಮಾಡಿ, ಹಿಂಗಾಲಿನಿಂದ ಹಿಂದಕ್ಕೆ ಸರಿಯುತ್ತಿದರು. ಹಾಗು ರಾಜಕಂಚುಕಿಗಳಂತೆ ಮಾರ್ಗ ತೋರಿಸುತ್ತಿದ್ದರು. ಗವ್ಹ ರ್ನರ, ಲೆಫ್ಟನೆಂಟ ಗವ್ಹರ್ನರ ಮುಂತಾದ ದೊಡ್ಡ ದೊಡ್ಡ ಅಧಿಕಾ ರಿಗಳು ತಮ್ಮ ತಮ್ಮ ಯೋಗ್ಯತೆಗೆ ಸರಿಯಾಗಿ ಭಯಭಕ್ತಿಯಿಂದ ಮಹಾರಾಜರಿಂದ ಸ್ವಲ್ಪ ಅಂತರದಮೇಲೆ ನಡೆಯುತ್ತಿದ್ದರು. ಹಿಂದು ಸ್ಥಾನದ ರಾಜಕುಮಾರರು ನಾನಾತರದ ವಸ್ತ್ರಾಲಂಕಾರಗಳನ್ನು ಧರಿಸಿ, ಬಾದಶಹಾ ಮತ್ತು ರಾಣಿಯವರ ಝುಗೆಗಳನ್ನು ಹಿಡಿದು ಕೊಂಡು, ಅವರ ಹಿಂದಿನಿಂದ ನಾವಕಾಶ ನಡೆದಿದ್ದರು. ಇದರಂತೆ ಸ್ವಾರಿಗಳು ಎರಡನೇ ರಾಜಮಂಟಪಕ್ಕೆ ಬಂದು ಸಿಂಹಾಸನಾ ರೂಢರಾದಕೂಡಲೆ, ಮಧುರವಾದ ಧ್ವನಿಗಳಿಂದ ಬ್ಯಾಂಡದ ಮೇಲಿನ

ಗಾನಗಳು ಸಾಗಿದವು. ರಾಜಭಟ್ಟಂಗಿಗಳು ಸಿಂಹಾಸನದ ಮುಂದೆ ನಿಂತು ಹೊಗಳಲಿಕ್ಕೆ ಆರಂಭಿಸಿದರು. ಇವರು ಸೈನ್ಯಕ್ಕೆ ಸಮೀಪ ದಲ್ಲಿಯೇ ನಾನಾತರದ ವಸ್ತ್ರಾಲಂಕಾರಗಳಿಂದ ಸುಶೋಭಿತರಾಗಿದ್ದರು. ಆ ವಸ್ತ್ರಗಳಮೇಲೆ ಎಷ್ಟೋ ಜರದ ಗೊಂಚಲಗಳಿದ್ದದ್ದಲ್ಲದೆ ಅವುಗಳಲ್ಲಿ ಸಿಂಹದ ಆಕೃತಿಯುಳ್ಳ ಗೊಂಬೆಗಳು ಥಳಥಳಿಸುತ್ತಿದ್ದವು. ಇವರೆಲ್ಲರು ಇಪ್ಪತ್ತು ನಾಲ್ಕು ಜನರಿದ್ದು ಅರ್ಧ ಜನರು ಇಂಗ್ಲೀಷರು ಇದ್ದರು. ಜನರಲ್ ಪೇಟನ್‌ರೆಂಬವರು ಯುರೋಪಿಯನ್ ರಾಜದೂತರ ಮೇಲಧಿಕಾರಿಗಳೂ ಮಲೀಕ ಉಮ್ಮರ ಹಯಾತಖಾನರೆಂಬವರು ದೇಶೀಯ ರಾಜದೂತರ ಮುಖ್ಯಾಧಿಕಾರಿಗಳೂ ಆಗಿದ್ದರು. ಉಭಯತರ ಕೈಯಲ್ಲಿಯೂ ಥಳಥಳ ಮಿಂಚುವಂಥ ತುತೂರಿಗಳಿದ್ದವು. ಅರಸರ ಜಾಹೀರನಾಮೆಗಳನ್ನು ಓದಿಹೇಳುವದೇ ಇವರ ಮುಖ್ಯಕೆಲಸವು. ಸಾರ್ವಭೌಮ ಅರಸರು ಹಿಂದುಸ್ಥಾನದ ಬಾದಶಹರಾದಬಗ್ಗೆ ಜನರಲ್ ಪೇಟನ್ ಎಂಬವರು ಇಂಗ್ಲಿಷಭಾಷೆಯಲ್ಲಿಯೂ ಮಲೀಕ ಉಮ್ಮರರೆಂಬವರು ಹಿಂದೀ ಭಾಷೆಯಲ್ಲಿಯೂ ಎಲ್ಲರಿಗೂ ಕೇಳಬರುವಂತೆ ಸಾರಿ ಹೇಳಿದರು. ಇಷ್ಟಾದಮೇಲೆ ಸುಮಾರು ೨೫೦೦೦ ತುಬಾಕೆಗಳನ್ನು ಹಾರಿಸಿ ಸಲಾಮು ಮಾಡಿದರು. ಹಾಗು 'ದೇವರು ರಾಜಾಧಿರಾಜರನ್ನೂ ರಾಣಿಯುವರನ್ನೂ ಕಾಪಾಡಲಿ' ಎಂದು ಬ್ಯಾಂಡದಧ್ವನಿಯೊಡನೆ ಜಯಘೋಷ ಮಾಡಿದರು. ತೋಫುಗಳು ಹಾರಿ ಅಂಬರವೆಲ್ಲ ಗದ್ದರಿಸಿತು. ತೋಫುಗಳ ಹೊಗೆಯಿಂದ ಸೂರ್ಯನ ಪ್ರಕಾಶಕ್ಕೆ ಅಡ್ಡಿಯಾಗುತ್ತಿತ್ತು. ಈ ಪ್ರಕಾರ ಅಲೌಕಿಕವಾದ ವೈಭವವನ್ನು ನೋಡಿ ಯಾರಮನಸ್ಸೂ ಆಶ್ಚರ್ಯಾನಂದಭರಿತವಾಗದೆ ಇರಲಾರದು. ತರುವಾಯು, ಹಿಂದುಸ್ಥಾನದ ಗವ್ಹರ್ನರ ಜನರಲ್‌ರಾದ ಲಾರ್ಡ ಹಾರ್ಡಿಂಜ ದೊರೆಗಳು ಸಿಂಹಾಸನದಹತ್ತರ ಬಂದು ನಗೆ ಮುಖದಿಂದ, ಬಾದಶಹರು ಕೊಟ್ಟ ದೇಣಗಿಗಳನ್ನು ಓದಿ ತೋರಿಸಲಿಕ್ಕೆ ಆರಂಭಿಸಿದರು.

---

೧೪. ಬಾದಶಹರು ಕೊಟ್ಟ ದೇಣಗಿಗಳು.

೧. ಹಿಂದುಸ್ಥಾನದಲ್ಲಿ ಹೆಚ್ಚಿಗೆ ವಿದ್ಯಾಭಿವೃದ್ಧಿಯಾಗಬೇಕೆಂತಲೂ ಜನರು ಹೆಚ್ಚಿಗೆ ಬುದ್ಧಿವಂತರಾಗಬೇಕೆಂತಲೂ ಸರಕಾರದವರ ಉದ್ದೇಶವಿರುತ್ತದೆ. ಆ ಪ್ರಕಾರ ನಮ್ಮ ಪಂಚಮಜಾರ್ಜ ಬಾದಶಹಗಳು ವಿದ್ಯಾಖಾತೆಯ ಸಲುವಾಗಿ ೫೦ ಲಕ್ಷರೂಪಾಯಿಗಳನ್ನು ಈಗ್ಗೆ ಕೊಟ್ಟು ಮುಂದೆಯಾದರೂ ಇದೇಮೇರೆಗೆ ಕೊಡುತ್ತೇವೆಂದು ಆಶ್ವಾಸನ ಕೊಟ್ಟಿರುತ್ತಾರೆ.

೨. ಐವತ್ತು ರೂಪಾಯಿಗಿಂತ ಕಡಿಮೆಸಂಬಳವುಳ್ಳ ಮುಲಕೀ, ಲಷ್ಕರೀ, ನಾವಿಕ ಮುಂತಾದ ಖಾತೆಗಳಲ್ಲಿಯ ಸರಕಾರೀ ನೌಕರರಿಗೆ, ಅರ್ಧ ತಿಂಗಳ ಸಂಬಳವನ್ನು ಇನಾಮಾಗಿ ಕೊಡಬೇಕೆಂದು ಗೊತ್ತಾಗಿರುತ್ತದೆ.

೩. ಇನ್ನು ಮುಂದೆ ಸೈನ್ಯದಲ್ಲಿರುವ ಹಿಂದೀಜನರಿಗೆ ಅವರ ಶೌರ್ಯದಬಗ್ಗೆ “ ವ್ಹಿಕ್ಟೋರಿಯಾ ಕ್ರಾಸ ” ಎಂಬದೊಂದು ಪದಕವು ಕೊಡಲ್ಪಡುವದು.

೪. ರಾಜ್ಯಾರೋಹಣದ ಪ್ರೀತ್ಯರ್ಥವಾಗಿ ಆದ ದರಬಾರದ ತಾರೀಖಿನಿಂದ ಮುಂದೆ ಹತ್ತುವರ್ಷಗಳ ಅವಧಿಯಲ್ಲಿ, “ದೀ ಆರ್ಡರ ಆಫ್ ಬ್ರಿಟಿಶ ಇಂಡಿಯಾ ” ಎಂಬ ಸಭೆಯಲ್ಲಿಯ ೧ ನೇ ವರ್ಗದ ಸಭಾಸದರ ಸಂಖ್ಯೆಯು ೫೨ ಕ್ಕಿಂತ ಹೆಚಿ ಗೆ ಬೆಳಿಸಲ್ಪಡುವದು. ಇದೇ ಮೇರೆಗೆ ಒಂದನೇ ಎರಡನೇ ವರ್ಗದೊಳಗೆ ಹದಿನೈದು ಜನರು ಹೊಸದಾಗಿ ನೇಮಿಸಲ್ಪಡುವರು.

೫. ಸರಹದ್ದಿನಲ್ಲಿರುವ ಸೈನಿಕರಲ್ಲಿಯೂ ಪೋಲೀಸರಲ್ಲಿಯೂ ಇದೇ ಮೇರೆಗೆ ನೇಮಣೂಕಗಳು ಮಾಡಲ್ಪಡುವವು.

೬. ಹಿಂದುಸ್ಥಾನದಲ್ಲಿ ಹಿಂದೀ ಲಷ್ಕರೀ ಅಮಲದಾರರಿಗೆ ಅವ ಏಕನಿಷ್ಠೆಯ ಸೇವೆಗಾಗಿ ಭೂಮಿ ಕೊಡಲ್ಪಟ್ಟೀತು, ಇಲ್ಲವೆ ತೆರಿ ಯಲ್ಲಿ ಸೂಟು ಬಿಡಲ್ಪಟ್ಟೀತು. "ಇಂಡಿಯನ್ ಆರ್ಡರ ಆ ಮೆರಿಟ್" ದೊಳಗಿನ ಮೃತಪಟ್ಟ ಅಧಿಕಾರಿಗಳ ಹೆಂಡರಿಗೆ ಮೂರ ವರ್ಷಗಳವರೆಗೆ ಕೊಡಲ್ಪಡುವ ಸೇಮಣೂಕದ ಹಣ, ಅವರ ಬದುಕಿರುವಮಟ್ಟಿಗೆ ಇಲ್ಲವೆ ಪುನಃ ಮದುವೆ ಮಾಡಿಕೊಳ್ಳುವವರೆ ಕೊಡಲ್ಪಡುವದು.

೭. ದಿವಾಣಬಹಾದ್ದೂರ, ಸರದಾರಬಹಾದ್ದೂರ, ಖಾನಬಹ ದ್ದೂರ, ರಾವಬಹಾದ್ದೂರ, ಖಾನಸಾಹೇಬ, ರಾವಸಾಹೇಬ, ರಾಯ ಬಹಾದ್ದೂರ, ಮುಂತಾದ ಪದವಿಧರರಿಗೆ ಏನಾದರೂ ಸನ್ಮಾನ ರ್ಶಕವಸ್ತು ಕೊಡಲ್ಪಡುವದು; ಇದಲ್ಲದೆ "ಮಹಾಮಹೋಪ ಧ್ಯಾಯ" ಮತ್ತು "ಸ್ಯಾಮ್ಯುಲ್ ಉಲ್‌ಮಾ" ಎಂಬ ಪದವಿಧ ರಿಗೆ, ಏತದ್ದೇಶೀಯ ಪುರಾತನ ವಿದ್ಯೆಯ ಸನ್ಮಾನ ಕ್ಕೋಸ್ಕ ಕೆಲವು ವರ್ಷಾಸನವು ಕೊಡಲ್ಪಟ್ಟೀತು.

೮. ದರಬಾರದ ಸ್ಮರಣಾರ್ಥವಾಗಿ ವಾಯವ್ಯಪ್ರಾಂತ ಮತ್ತು ಬಲೂಚಿಸ್ಥಾನದಲ್ಲಿಯ ಕೆಲವುಜನರಿಗೆ ಅವರು ಮಾಡಿದ ಯೋಗ್ಯ ಕೆಲಸದ ಸಲುವಾಗಿ ಒಂದು ಇಲ್ಲವೆ ಎರಡು ಸಂತತಿಯ ವರೆ ಭೂಮಿ ಇನಾಮೂಗಿ ಕೊಡಲ್ಪಡುವದು.

೯. ಚಕ್ರವರ್ತಿಯವರು ಪಟ್ಟವನ್ನೇರುವಾಗ ಅವರ ಮಾಂಡ ಲಿಕ ಭೂಪಾಲರು ಕೊಡಬೇಕಾಗುವ ನಜರಾಣೆಯು ಇನ್ನು ಮುಂದೆ ತೆಗೆದುಕೊಳ್ಳಲ್ಪಡಲಿಕ್ಕಿಲ್ಲ.

೧೦. ಮೇವಾಡ ದೊಳಗಿನ ಸಂಸ್ಥಾನಿಕರ ಕಡೆಯಿಂದಲೂ ಕಾಠೇವಾಡ ಗುಜರಾಥ ದೊಳಗಿನ ನಾನ್ ಜ್ಯುರಿಸ್‌ಡಿಕ್‌ಶನ ಸಂಸ್ಥಾನಿಕರ ಕಡೆಯಿಂದಲೂ ಬರತಕ್ಕ ಸಾಲವು ಹಿಂದುಸ್ಥಾನ ಸರಕಾರದವರಿಂದ ಅಂಶತಃ ಇಲ್ಲವೆ ಪೂರಾ ಬಿಟ್ಟುಬಿಡಲ್ಪಟ್ಟೀತು.

೧೧. ದುಷ್ಟಸ್ವಭಾವದ ಸಲುವಾಗಿಯೂ ಅಪರಾಧಗಳ ಸಲುವಾ ಗಿಯೂ ಶಿಕ್ಷೆ ಹೊಂದಿದವರಲ್ಲಿ ಕೆಲವರನ್ನೂ ಸ್ವಲ್ಪಸಾಲವಿದ್ದ

ಅದನ್ನು ಕೊಡಲಿಕ್ಕೆ ಅಸಮರ್ಥರಾದದರಿಂದ ಶಿಕೆ ಹೊಂದಿದ ಜನರ ಸಾಲವನ್ನು ಸರಕಾರದವರು ಕೊಟ್ಟು ಅವರನ್ನೂ ಬಿಡುಗಡೆ ಮಾಡುವರು.

ಈ ಮೇರೆಗೆ ಎಂದೂ ಮರೆಯಕೂಡದಂಥಾ ವರಗಳನ್ನು ಕೊಟ್ಟದ್ದು ಕೇಳಿ ಎಲ್ಲ ಜನರು ಆನಂದಭರಿತರಾಗಿ ಸಾರ್ವಭೌಮರ ಜಯಜಯಕಾರವನ್ನು ಮಾಡಿದರು.

ತರುವಾಯ ಚಕ್ರವರ್ತಿಯವರು ತೀವ್ರವೇ ದರಬಾರು ಮುಗಿಸಿ ಹೊರಟು ಹೋಗುವರೆಂದು ಗೊತ್ತಾದ್ದರಿಂದ ಪ್ರಿಯ ಪ್ರೇಕ್ಷಕರು ಒಂದೇಸವನೇ ಅವರನ್ನು ನೋಡಹತ್ತಿದರು. ಇದೇ ಮೇರೆಗೆ ಆ ಪಂಚಮ ಜಾರ್ಜ ಮಹಾರಾಜರುಸಹ ಪ್ರೀತಿಯಿಂದ ಎಲ್ಲರನ್ನು ನೋಡುತ್ತಿದ್ದರು.

ತರುವಾಯ ಬಾದಶಹರು ಸಿಂಹಾಸನದ ಮುಂದೆ ಎದ್ದು ನಿಂತು, ಬಂಗಾಲದ ವಿಭಾಗಣೆಯಲ್ಲಿ ಹೆಚ್ಚುಕಡಿಮೆ ಮಾಡಲ್ಪಡುವದು, ಮತ್ತು ಇನ್ನು ಮುಂದೆ ದಿಲ್ಲೀ ಪಟ್ಟಣವು ಬ್ರಿಟಿಶ್ ಹಿಂದುಸ್ತಾನದ ರಾಜಧಾನಿ ಮಾಡಲ್ಪಟ್ಟಿರುತ್ತದೆ, ಎಂದು ಮಧುರವಾದ ಎರಡು ಮಾತುಗಳನ್ನಾಡಿ ಪ್ರಜೆಗಳಿಗೆ ಆಶೀರ್ವಚನಗಳನ್ನು ಕೊಟ್ಟರು.

ಈ ಪ್ರಕಾರ ಆನಂದೋತ್ಸವಗಳು ತೀರಿದಮೇಲೆ ಬಾದಶಹರ ಹೆಸರಿನಿಂದ ಮೂರುಸಾರೆ ಜಯಘೋಷವನ್ನು ಮಾಡಿದರು. ತರುವಾಯ ಬಾದಶಹರು ದರಬಾರವನ್ನು ವಿಸರ್ಜನೆ ಮಾಡಿ, ರಥದಲ್ಲಿ ಪತ್ನೀಸಮೇತರಾಗಿ ವಿರಾಜಮಾನರಾಗಿ ಹೋದರು. ಆಮೇಲೆ ದೊಡ ದೊಡ್ಡ ದೇಶೀಯ ಅರಸರೂ ಸರಕಾರೀ ದೊಡ ಅಧಿಕಾರಿಗಳೂ ತಮ್ಮ ತಮ್ಮ ಬಿಡಾರಗಳಿಗೆ ಹೊರಟು ಹೋದರು.

ಈಮೇರೆಗೆ ವೈಭವದಿಂದ ಮೆರೆಯುತ್ತಿರುವಂಥ ದಿಲ್ಲೀಪಟ್ಟಣದಲ್ಲಿ ಬಹುಭವ್ಯವಾಗಿಯೂ ರಮಣೀಯವಾಗಿಯೂ ತೋರುವ ಈ ದರಬಾರವು ಚಿರಸ್ಮರಣೀಯವಾಗಿ ಹೋಯಿತು. ಈ ದರಬಾರದ

 

" SHRI RAMTATVA PRAKASH " PRESS-BELGAUM